ಬಾಲಸಾಹಿತ್ಯ ಮಂಡಲ,
ಲಿಮಿಟೆಡ್,
ಕೊಡಿಯಾಲಬೈಲು, ಮಂಗಳೂರು.

ಸಿಂದಬಾದ ನಾವಿಕ

ತುರಿ ಮಳೆಗಾಲ

892.733
BML

1932

ಕ್ರಯ:–೦–೨–೦ PRICE: –0–2–0

Approved by the Text Book Committee, Madras.
Recognised by the Director of Public Instruction, Madras.

PUBLISHED BY

THE BALA SAHITYA MANDALA, LTD.,
Kodialbail, Mangalore.

Copyright.

FOLK TALES FOR LITTLE FOLKS SERIES
ILLUSTRATED **ONE ANNA EACH**

1. How The Mice Danced.
2. The Lark And Its Eggs.
3. The Crow And The Sparrow.
4. The Wood Louse Is Dead.

Printed at the Codialbail Press, Mangalore, S. K.—1932.

S.M.S.V.SUBRAYA
GANDHI VILAS
091460
892.733
BML

ಸಿಂದಬಾದ ನಾವಿಕನು.

ಏಷ್ಯಾಮೈನರ ಎಂಬ ಹೆಸರಿನ ದೇಶದಲ್ಲಿ ಬಗ್ದಾದವೆಂಬ ದೊಡ್ಡ ನಗರವಿದೆ. ಅಲ್ಲಿ ಹಾರೂನ ಎಲ್‌ರಷೀದನೆಂಬ ಖಲೀಫನು ಹಲವು ವರ್ಷಗಳ ಹಿಂದೆ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುತ್ತಿದ್ದನು. ಆ ನಗರದಲ್ಲಿ ಬಡ ಕೂಲಿಯವನೊಬ್ಬನು ಇದ್ದನು. ಅವನ ಹೆಸರು ಸಿಂದಬಾದ. ಒಂದು ದಿನ ಸಿಂದ ಬಾದನು ಭಾರವಾದ ಹೊರೆಯನ್ನು ಹೊತ್ತು ಕಾಲು ಸೋತು ನಡೆಯಲಾರದೆ, ಒಂದು ದಿವ್ಯವಾದ ಮನೆಯ ಮುಂದುಗಡೆಯ ಮೆಟ್ಟಲುಗಳ ಮೇಲೆ ತನ್ನ ತಲೆಯ ಮೇಲಿನ ಹೊರೆಯನ್ನು ಇಳಿಸಿ, ಒಂದು ಗಳಿಗೆ ದಣುವಾರಿಸುತ್ತಾ ಕುಳಿತುಕೊಂಡನು. ಆ ಮನೆಯ ಹೆಬ್ಬಾಗಿಲು ಅರೆತೆರೆದಿತ್ತು. ಕೂಲಿಯವನು ಒಳಕ್ಕೆ ಇಣಿಕಿ ನೋಡಿದನು. ಅಲ್ಲಿ ದೊಡ್ಡದೊಂದು ಕೋಣೆಯಲ್ಲಿ ಒಂದು ಕಡೆ ಒಂದು ರತ್ನಕಂಬಳಿಯ ಮೇಲೆ ಒಬ್ಬನು ದಟ್ಟವಾದ ಲೋಡಿಗೆ ಒರಗಿ ಕುಳಿತುಕೊಂಡಿದ್ದನು. ಕೆಲವು ದಾಸದಾಸಿಯರು ಅತ್ತಿತ್ತ ಓಡುತ್ತಾ ಬಗೆಬಗೆಯ ತಿಂಡಿ ತುಂಬಿದ ಚಿನ್ನಬೆಳ್ಳಿಯ ತಟ್ಟೆಗಳನ್ನು ಹೊತ್ತು ತಂದು ಅವನ ಮುಂದಿಡುತ್ತಿದ್ದರು. ಒಬ್ಬಿಬ್ಬರು ಬೀಸಣಿಗೆ ಹಿಡಿದುಕೊಂಡು, ಅವನಿಗೆ ಗಾಳಿ ಹಾಕು ತ್ತಿದ್ದರು. ದೊರೆಯ ಸುಖಸಂಪತ್ತನ್ನು ಕಂಡು ಆ ಕೂಲಿಯವನಿಗೆ ಆಶ್ಚರ್ಯವಾಯಿತು. ತಿಂಡಿಯ ಪರಿಮಳವಂತೂ ಅವನ ಮೂಗಿಗೆ ಹೊಡೆದು ಬಾಯಲ್ಲಿ ನೀರು ಸುರಿಯುತಿತ್ತು. ಆಗ ಸಿಂದಬಾದನು ತನ್ನಲ್ಲಿಯೇ ನೊಂದುಕೊಂಡು "ಅಯ್ಯೋ, ದೇವರೆ! ಈ

SAJIV. V. S. MOHAN

ಮನುಷ್ಯನಿಗೆ ಮೈಮುರಿದು ಕೆಲಸ ಮಾಡುವ ಅವಶ್ಯವಿಲ್ಲ; ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಸುಖವನ್ನು ಕೊಟ್ಟು, ಹೊರೆ ಹೊರುವ ಬಡತನದ ಕಷ್ಟವನ್ನು ನನ್ನ ಹಣೆಯಲ್ಲಿ ಬರೆದಿಯಲ್ಲ! ನಾನು ಮಾಡಿದ ಅಪರಾಧವೇನು?" ಎಂದು ಹೇಳಿ ಮೆಲ್ಲಗೆ ಹೊರೆಯನ್ನು ಎತ್ತಿಕೊಂಡು ಮೆಟ್ಟಲು ಇಳಿಯುವುದಕ್ಕೆ ತೊಡಗಿದನು.

ಸಿಂದಬಾದನು ಆಡಿದ ಮಾತುಗಳನ್ನು ಆ ದೊರೆಯು ಕಿವಿಕೊಟ್ಟು ಕೇಳುತ್ತಿದ್ದನು. ಅವನು ಕೂಲಿಯವನನ್ನು ಒಳಗೆ ಕರಕೊಂಡು ಬರಬೇಕೆಂದು ಒಂದು ಆಳಿಗೆ ಅಪ್ಪಣೆ ಕೊಡಲು, ಆಳು ಹೋಗಿ ಆ ಕೂಲಿಯವನನ್ನು ಒಳಗೆ ಬರಹೇಳಿದನು. ಆಗ ಸಿಂದಬಾದನು "ಓಹೋ! ನನ್ನ ಬಾಯಿ ಮೀರಿಬಂದ ಮಾತು ಇವರ ಕಿವಿಗೆ ಬಿದ್ದು ನನ್ನನ್ನು ದಂಡಿಸುವುದಕ್ಕೆ ಕರೆಯುತ್ತಾರೆ"— ಎಂದು ಯೋಚಿಸಿ, "ಒಳಗೆ ಬರುವುದಿಲ್ಲ" ಅಂದನು. ಕಡೆಗೆ ಆಳು ಬಲಾತ್ಕಾರದಿಂದ ಅವನನ್ನು ಸೆಳೆದುಕೊಂಡು ಹೋಗಿ ತನ್ನ ಧನಿಯ ಮುಂದೆ ನಿಲ್ಲಿಸಿದನು.

ಧನಿಕನನ್ನು ನೋಡಿದೊಡನೆ ಆ ಕೂಲಿಯಾಳು ಬೆರಗಾಗಿ ಬಾಯಿಬಾರದೆ ವಿನಯದಿಂದಲೂ ಲಜ್ಜೆಯಿಂದಲೂ ತಲೆಬಾಗಿಸಿ ನಿಂತನು. ಧನಿಕನು ಅವನ ಮೇಲೆ ಕನಿಕರಪಟ್ಟು ಅವನನ್ನು ಪಕ್ಕದಲ್ಲಿ ಕುಳ್ಳಿರಿಸಿ, ಮಧುರವಾದ ಭಕ್ಷ್ಯಗಳನ್ನು ಒಂದೊಂದಾಗಿ ತಟ್ಟೆಯಿಂದ ಈಚೆಗೆ ತೆಗೆದು, ಅವನ ಕೈಗೆ ಇಕ್ಕಿ "ತಿನ್ನು" ಎಂದು ಹೇಳಿದನು. ಹಾಗೆ ಊಟ ಮಾಡಿಸಿದ ಮೇಲೆ "ಅಯ್ಯಾ! ನೀನು ಈಗ ತಾನೇ ನಮ್ಮ ಮನೆಯ ಮೆಟ್ಟಲ ಮೇಲೆ ಕೂತುಕೊಂಡು ಆಡಿದ ಮಾತುಗಳನ್ನು ಇನ್ನೊಮ್ಮೆ ನಾವು ಕೇಳಲಾಗದೆ?" ಎಂದು ಧನಿಕನು ನುಡಿದನು. ಅದಕ್ಕೆ ಸಿಂದಬಾದನು ಗಾಬರಿಯಿಂದ "ಸ್ವಾಮಿ, ನನ್ನ ತಪ್ಪನ್ನು ಕ್ಷಮಿಸಿರಿ! ಹೊರೆ

ಹೊತ್ತ ಆಯಾಸದಿಂದ ಬಾಯಿಯಿಂದ ಮಾತು ತಪ್ಪಿಬಂತು" ಎಂದು ಹೇಳಿದನು. ಕಡೆಗೆ ಧನಿಕನು ಬಹಳ ಒತ್ತಾಯ ಮಾಡಿದ್ದರಿಂದ ಸಿಂದಬಾದನು ತನ್ನ ಬಡತನದ ಕಷ್ಟಗಳನ್ನು ವಿವರಿಸಿದನು. ಆಗ ಧನಿಕನು "ಅಯ್ಯಾ! ನಿನ್ನ ಸಂಗತಿಯನ್ನು ಕೇಳಿದೆನು. ಆದರೆ ನನಗೆ ಈ ಸಂಪತ್ತು ಹೇಗೆ ಬಂತೆಂದು ನಿನಗೆ ಹೇಳುತ್ತೇನೆ. ನನಗೆ ಈ ಸಂಪತ್ತು ಕಷ್ಟಪಡದೆ ಕೈಸೇರಲಿಲ್ಲ. ಆ ವೃತ್ತಾಂತವನ್ನು ಕೇಳಿದರೆ ನಿನಗೆ ಅತಿ ಆಶ್ಚರ್ಯವಾಗದೆ ಇರದು. ಅದನ್ನು ನಿನಗೆ ಹೇಳುತ್ತೇನೆ. ಕಿವಿಗೊಟ್ಟು ಕೇಳು" ಎಂದನು. ಆ ವಿಚಿತ್ರಕಥೆಯನ್ನು ಕೇಳ ಬೇಕೆಂಬ ಲವಲವಿಕೆಯಿಂದ ಅಲ್ಲಿದ್ದವರೆಲ್ಲರು ಧನಿಕನ ಹತ್ತಿರ ಬಂದು, ಸದ್ದುಮಾಡದೆ ಸುತ್ತಲು ಕೂತುಕೊಂಡರು.

ಒಂದನೆಯ ಪ್ರಯಾಣ

ಅಯ್ಯಾ! ಪೂಜ್ಯರೇ! ನನ್ನನ್ನು ಸಿಂದಬಾದ ನಾವಿಕನು ಎಂದು ಕರೆಯುತ್ತಾರೆ. ನಾನು ಏಳು ಸಲ ನಾವೆಯಲ್ಲಿ ಭೂಲೋಕದ ಸುತ್ತಲೂ ಪಯಣಮಾಡಿದವನು. ನಾನು ನನ್ನ ತಂದೆಯವರಿಗೆ ಒಬ್ಬನೇ ಮಗನು. ಅವರು ಸಾಯುವಾಗ ನನಗೆ ಹೇರಳ ಆಸ್ತಿಯನ್ನು ಮಾಡಿಟ್ಟಿದ್ದರು. ಹೀಗಾಗಿ ಜೀವನದ ಕಷ್ಟವು ನನಗೆ ತಿಳಿಯಲಿಲ್ಲ. ತಂದೆಯು ಸಾಯುವಾಗ ನನಗೆ ಬರೇ ಇಪ್ಪತ್ತು ವರ್ಷ ವಯಸ್ಸು ಇತ್ತು. ಆದ್ದರಿಂದ ದುಡ್ಡಿನ ಬೆಲೆ ಗೊತ್ತಾಗದೆ ಒಂದೆರಡು ವರ್ಷಗಳಲ್ಲಿಯೇ ನನ್ನಲ್ಲಿ ಇದ್ದುಬದ್ದು ದನ್ನೆಲ್ಲ ಕರಡುಮಾಡಿದೆನು. ದುಷ್ಟರೂ ದುರ್ವ್ಯಸನಿಗಳೂ ಆದ ನನ್ನ ಗೆಳೆಯರು ನನ್ನ ಆಸ್ತಿಯೆಲ್ಲಾ ಬರಿದಾಗುವ ವರೆಗೆ ನನ್ನ ಬೆನ್ನುಬಿಡದೆ, ಜೇನಿಗೆ ಮುತ್ತಿದ ನೊಣಗಳಂತೆ ನನ್ನ ಸುತ್ತುಮುತ್ತಲೂ ಸುಳಿದಾಡು ತಿದ್ದರು. ನಾನು ದರಿದ್ರನಾದೆನೆಂದು ಗೊತ್ತಾದ ಮೇಲೆ ಗದ್ದೆಯಲ್ಲಿ ತೂಗ ಹಾಕುವ ಬೆರ್ಚನನ್ನು ಕಂಡು ಓಡಿಹೋಗುವ ಕಾಗೆಗಳಂತೆ ನನ್ನನ್ನು ತೊಲಗಿ ಹೋದರು. ಅನಂತರ ನನ್ನಲ್ಲಿದ್ದ ವಸ್ತು ಒಡವೆಗಳನ್ನು ಮಾರಿ,

ಕೆಲವು ವರ್ತಕರೊಂದಿಗೆ ಸಮುದ್ರ ವ್ಯಾಪಾರಕ್ಕೆ ಹೊರಟು ಬಾಲ್ಸೋರಾ ಪಟ್ಟಣದಿಂದ ಹಡಗನ್ನು ಹತ್ತಿ ಹೋದೆನು.

ನಾವು ಪಾರ್ಷಿಕೊಲ್ಲಿಯ ಮಾರ್ಗವಾಗಿ ಹಿಂದುಸ್ಥಾನದ ಕಡೆಗೆ ಪ್ರಯಾಣ ಮಾಡುತಿದ್ದೆವು. ನನಗೆ ಹಡಗುಪಯಣದ ಅಭ್ಯಾಸವಿಲ್ಲದ್ದ ರಿಂದ ಮೊದಲು ಮೊದಲು ಸ್ವಲ್ಪ ಕಷ್ಟವಾಯಿತು. ಕಡಲಿನ ತೆರೆಗಳ ಮೇಲೆ ಹಡಗು ಉಯ್ಯಾಲಾಡುತ್ತಿರುವಾಗ ನನಗೆ ತಲೆ ತಿರುಗಿತು, ವಾಂತಿ ಬಂತು, ಸಂಕಟವಾಯಿತು. ಆದರೆ ಕೆಲವು ದಿನಗಳು ದಾಟಿದ ಮೇಲೆ ನನಗೆ ಸುಖವಾಗಿ, ಇತರ ವರ್ತಕರಂತೆ ಹಡಗಿನ ಮೇಲೆ ಸರಿಯಾಗಿ ನಡೆಯಲಿಕ್ಕೂ ಆಹಾರ ತಕ್ಕೊಳ್ಳಲಿಕ್ಕೂ ಸಾಧ್ಯವಾಯಿತು. ಹಡಗು ಆಯಾ ಬಂದರುಗಳಲ್ಲಿ ನಿಂತು, ಆ ಊರುಗಳಲ್ಲಿ ನಮ್ಮ ಸರಕನ್ನು ಇಳಿಸುತ್ತಾ, ಅಲ್ಲಿಂದ ಹೊಸ ಸರಕನ್ನು ತುಂಬಿಕೊಳ್ಳುತ್ತಾ ಮುಂದರಿಸಿತು. ಕಡೆಗೆ ಒಂದು ಚಿಕ್ಕ ದ್ವೀಪವನ್ನು ಮುಟ್ಟುವಾಗ ಗಾಳಿ ಫಕ್ಕನೆ ಬಿದ್ದು ಹೋಯಿತು. ಹಡಗು ಮುಂದಕ್ಕೆ ಸಾಗದೆ ಅಲ್ಲೆ ತಡೆಯಿತು. ಆಗ ಕಪ್ತಾನ, ಎಂದರೆ ಹಡಗಿನ ಯಜಮಾನನು ಅದನ್ನು ಆ ದ್ವೀಪದ ಬಳಿಯಲ್ಲಿ ಲಂಗರುಹಾಕಿ ನಿಲ್ಲಿಸಿ, ಇಷ್ಟವಿದ್ದವರು ದ್ವೀಪವನ್ನು ನೋಡಿಬರಬಹುದೆಂದು ನಮಗೆ ತಿಳಿಸಿದನು. ನಾನೂ ಇನ್ನು ಒಬ್ಬಿಬ್ಬರೂ ಒಂದು ಚಿಕ್ಕ ದೋಣಿಯಲ್ಲಿ ಕುಳಿತುಕೊಂಡು ಆ ದ್ವೀಪಕ್ಕೆ ಹೋದೆವು. ಅಲ್ಲಿ ತಿಂಡಿ ತಿಂದು ಸ್ವಲ್ಪ ಹೊತ್ತು ತಿರುಗುವಷ್ಟರಲ್ಲಿ ಫಕ್ಕನೆ ಆ ದ್ವೀಪವು ನಡು ಗಲಾರಂಭಿಸಿತು. ಹಡಗಿನ ಕಲಾಸಿಗಳು "ಓಹೊ! ಇದು ದ್ವೀಪವಲ್ಲ, ಇದು ದೊಡ್ಡ ತಿಮಿಂಗಿಲ ಮೀನಿನ ಬೆನ್ನು. ನೀವು ಅಡಿಗೆಗೋಸ್ಕರ ಬೆಂಕಿ ಮಾಡುವಾಗ ಶಾಕವು ತಗಲಿದ್ದರಿಂದ ಅದು ತನ್ನ ಮೈಯನ್ನು ಅಲ್ಲಾಡಿಸಿರ ಬೇಕು. ನೀವು ಈಗಲೇ ದೋಣಿಯನ್ನು ಹತ್ತಿ ಹಿಂದೆ ಹೋಗದಿದ್ದರೆ ಮುಳುಗಿ ಸಾಯುವುದೇ ನಿಶ್ಚಯ" ಎಂದು ಕೂಗಿ ಹೇಳಿದರು. ನಾವು ಒಮ್ಮೆಲೆ ಎಲ್ಲರೂ ಅವಸರದಿಂದ ದೋಣಿ ಹತ್ತಲು ಓಡಿದೆವು. ನಾನು ದೋಣಿ ಹತ್ತುವಷ್ಟರಲ್ಲಿ ಆ ತಿಮಿಂಗಿಲವು ಸಮುದ್ರದಲ್ಲಿ ಫಕ್ಕನೆ ಮುಳುಗಿ ಮಾಯವಾಯಿತು. ಉಳಿದವರು ನನ್ನನ್ನು ಅಲ್ಲೇ ಬಿಟ್ಟು ಹಡಗನ್ನು ಸೇರಿ ಕೊಂಡರು. ನನಗೆ ಕಡಲಿನಲ್ಲಿ ತೇಕುಮುಳುಗಾಯಿತು. ಬೆಂಕಿ ಉರಿಸುವುದಕ್ಕೆಂದು ತಂದಿದ್ದ ಒಂದು ಮರದ ತುಂಡು ನನ್ನ ಕೈಗೆ ಸಿಕ್ಕಿತು.

ನಾನು ಒಂದು ಕೈಯಿಂದ ಅದನ್ನು ಹಿಡಿದು ಹಡಗಿನ ಕಡೆಗೆ ಈಸ ತೊಡಗಿದೆ. ಅಷ್ಟರಲ್ಲಿ ಹಡಗಿನ ಕಪ್ತಾನನು ತಿಮಿಂಗಿಲವು ಪುನಃ ಮೇಲಕ್ಕೆ ಎದ್ದರೆ ಹಡಗು ತುಮುರುತುಮುರಾದೀತು ಎಂದು ಹೆದರಿ, ಬೇಗಬೇಗನೆ ಹಾಯಿಪಟವನ್ನು ಬಿಡಿಸಿ, ಹಡಗನ್ನು ನಡಿಸತೊಡಗಿದನು. ಹೀಗಾಗಿ ಹಡಗನ್ನು ಸೇರಬೇಕೆಂಬ ನನ್ನ ಆಸೆ ನನ್ನಲ್ಲೇ ಉಳಿಯಿತು.

ನಾನು ಸಮುದ್ರದಲ್ಲಿ ತೆರೆಗಳ ಹೊಡೆತಕ್ಕೆ ಸಿಕ್ಕಿ ಒಂದು ಹಗಲು ಒಂದು ಇರುಳು ತೇಲುತ್ತ ಕಂಗೆಟ್ಟು ಕಳವಳಿಸಿ ಸಾಯಲಾರದೆ, ಜೀವದಾಸೆಯಿಂದ ಆ ಕೊರಡನ್ನು ಹಿಡಿದು, ಅಂಗಾತನೆ ಬಿದ್ದುಕೊಂಡೆನು. ಆಗ ದೊಡ್ಡದೊಂದು ಅಲೆಯು ನನ್ನನ್ನು ಎತ್ತಿಕೊಂಡು ಸಮೀಪವಿರುವ ತೀರಕ್ಕೆ ಬಡಿದುಬಿಟ್ಟಿತು. ದಡದ ಮೇಲೆ ಸ್ವಲ್ಪಹೊತ್ತು ಬಿದ್ದುಕೊಂಡು ಮತ್ತೆ ಎಚ್ಚರವಾಗಿ ಕಣ್ಣುತೆರೆದು ನೋಡಿದೆನು. ತೀರದ ದಂಡೆಯು ಬಲು ಎತ್ತರವಾಗಿತ್ತು. ಒಂದು ಮರದ ಬೀಳಲುಗಳು ಅಲ್ಲಿ ಅತ್ತಿತ್ತ ಹರಿದಾಡಿ, ಕಡೆಗೆ ದಂಡೆಯ ಬದಿಯಲ್ಲಿ ಬೆಳೆದು ಹೋಗಿ, ಕೆಳಕ್ಕೆ ಇಳಿದುಬಂದುದನ್ನು ಕಂಡೆನು; ಅವನ್ನು ಹಿಡಿದು ಬಲು ಪ್ರಯಾಸದಿಂದ ಮೇಲೆ ಹತ್ತಿಕೊಂಡು ಹೋದೆನು. ಅನಂತರ ನನಗೆ ಉಂಟಾಗಿದ್ದ ಬಲವಾದ ಬಳಲಿಕೆಯಿಂದ ಮುಂದೆ ಹೋಗಲು ಕಾಲು ಬಾರದೆ ಆ ಮರದ ಬುಡದಲ್ಲಿ ಒಂದು ಗಳಿಗೆ ಮಲಗಿ ನಿದ್ದೆ ಹೋದೆನು. ನಿದ್ದೆಯಿಂದ ಎಚ್ಚತ್ತಾಗ ಹೊತ್ತು ಏರಿದ್ದು ಗೊತ್ತಾಗಲೇ ಇಲ್ಲ. ಹಸಿದು ಬಾಯಾರಿದ್ದರಿಂದ ಆಹಾರವೇನಾದರೂ ಸಿಗುವುದೋ ಎಂದು ಹುಡುಕಿಕೊಂಡು ಹೊರಟೆನು. ಅಲ್ಲೆ ಒಂದು ಮರದ ಮೇಲೆ ಕೆಲವು ಸಿಹಿ ಹಣ್ಣುಗಳೂ ಸಮೀಪದಲ್ಲಿ ಒಂದು ನೀರಿನ ಬುಗ್ಗೆಯೂ ಕಣ್ಣಿಗೆ ಬಿದ್ದುವು. ಹಣ್ಣುಗಳನ್ನು ತಿಂದು ನೀರನ್ನು ಕುಡಿದು ಮುಂದರಿಸಿ ಹೋಗಲು ವಿಸ್ತಾರವಾದ ಹುಲ್ಲುಗಾವಲು ಕಂಡುಬಂತು. ಅಲ್ಲಿ ಒಂದು ಚಲೋ ಕುದುರೆಯನ್ನು ಒಂದು ಗೂಟಕ್ಕೆ ಕಟ್ಟಿಹಾಕಿದ್ದರು. ಆ ಕುದುರೆಯನ್ನು ನಾನು ನೋಡುತ್ತಾ ಅಲ್ಲಿ ನಿಂತಿರಲು, ಕೆಳಗಿನಿಂದ ಒಬ್ಬನು ಹೊರಟು ಬಂದು "ನೀನಾರು, ಇಲ್ಲಿ ಏನು ಮಾಡುತ್ತಿರುವೆ?" ಎಂದು ನನ್ನೊಡನೆ ವಿಚಾರಿಸಿದನು. ನನ್ನ ಸಮಾಚಾರವನ್ನು ಕೇಳಿ "ನನ್ನ ಜೊತೆಯಲ್ಲಿ ಬಾ" ಎಂದು ಹೇಳಿ, ಅವನು ನನ್ನನ್ನು ಒಂದು ಗವಿಯೊಳಗೆ ಕರೆದುಕೊಂಡು ಹೋದನು. ಆ ಗುಹೆಯಲ್ಲಿ ಇನ್ನೂ

ಹಲವರಿದ್ದರು. ಅವರು ನನಗೆ ಊಟಕೊಟ್ಟ ಮೇಲೆ “ಅಯ್ಯಾ! ನೀವು ಯಾರು?” ಎಂದು ನಾನು ಕೇಳಿದೆನು. ಅವರು “ನಾವು ಈ ದ್ವೀಪದ ಒಡೆಯನಾದ ಮಿಹ್ರಾಸನೆಂಬ ದೊರೆಯ ಕುದುರೆಯಾಳುಗಳು. ನಾವು ಒಂದು ಕೆಲಸದ ನಿಮಿತ್ತ ಈ ತೀರಕ್ಕೆ ಬಂದಿದ್ದೆವು. ಇಂದಿಗೆ ನಮ್ಮ ಕೆಲಸವು ಮುಗಿಯಿತು. ನಾವು ನಾಳೆಯೇ ರಾಜಧಾನಿಗೆ ಹೊರಡುವುದರಲ್ಲಿ ಇದ್ದೇವೆ. ನಿನಗೆ ಇಷ್ಟವಿದ್ದರೆ ನೀನೂ ಬರಬಹುದು” ಎಂದರು. ನಾನು ಒಪ್ಪಿಕೊಂಡು ಅವರ ಸಂಗಡ ಪ್ರಯಾಣಮಾಡಿದೆನು. ನಾನು ರಾಜಧಾನಿಗೆ ಮುಟ್ಟಿದ ಮೇಲೆ ಅರಸನು ನನ್ನ ವೃತ್ತಾಂತವನ್ನು ಕೇಳಿ ಪರಿತಾಪಪಟ್ಟು ನನ್ನನ್ನು ಸತ್ಕರಿಸಿದನು. ಆ ಮೇಲೆ ಅಲ್ಲಿ ಕೆಲವು ದಿನ ಇದ್ದು ಆ ಊರಿನ ಮುಖ್ಯಸ್ಥರೊಡನೆ ಸ್ನೇಹವನ್ನು ಬೆಳಸಿ, ಸುಖವಾಗಿ ಇದ್ದೆನು.

ಮಿಹ್ರಾಸನೆಂಬ ಈ ರಾಜನು ಕೆಸಲ್ ಎಂಬ ಹೆಸರಿನ ಈ ದ್ವೀಪದ ದೊರೆಯಾಗಿದ್ದನು. ಆ ದ್ವೀಪದಲ್ಲಿ ಪ್ರತಿ ರಾತ್ರಿ ಭಾರಿ ಶಬ್ದವೊಂದು ಕೇಳಿಬರುತಿತ್ತು. ಇದರ ಕಾರಣವೇನೆಂದು ಗೊತ್ತಾಗದೆ ಅಲ್ಲಿಯ ಜನರು ಹೆದರಿ ಅರಸನಿಗೆ ದೂರು ಕೊಟ್ಟಿದ್ದರು. ಅರಸನು ಈ ವರ್ತಮಾನವನ್ನು ಕೇಳಿ, ಚಿಂತೆಯಲ್ಲಿ ಮುಳುಗಿದ್ದನು. ಆಗ ನಾನು ಅದರ ಕಾರಣವನ್ನು ಹುಡುಕಿ ತೆಗೆಯುವೆನೆಂದು ಅರಸನ ಅಪ್ಪಣೆಯಂತೆ ಆ ದ್ವೀಪಕ್ಕೆ ಹೊರಟೆನು. ಅಲ್ಲಿ ಹೋಗಿ ಇರುಳೆಲ್ಲಾ ಸಂಚರಿಸಿ ನೋಡಲಾಗಿ ಎತ್ತರವಾದ ಒಂದು ಮರದ ಮೇಲೆ ಕೆಲವು ಮಂಗಗಳು ಒಂದು ಭೇರಿಯನ್ನು ಇರಿಸಿ, ಅದನ್ನು ಕೋಲುಗಳಿಂದ ಬಡೆಯುತ್ತಾ ವಿನೋದ ಮಾಡುತಿದ್ದುವು. ಅದನ್ನು ನೋಡಿ ನಾನು ಮರಳಿ ಮಿಹ್ರಾಸ ರಾಜನಲ್ಲಿಗೆ ಬಂದು, “ಅದು ಪಿಶಾಚಿಗಳ ಗಲಾಟೆಯಲ್ಲ, ಮಂಗಗಳ ಆಟ” ಎಂದು ತಿಳಿಸಿದೆನು. ಅರಸನು ಸಂತೋಷಪಟ್ಟು ನನ್ನನ್ನು ತನ್ನ ಅರಮನೆಯಲ್ಲಿಯೇ ಕೆಲವು ದಿನ ನಿಲ್ಲಿಸಿಕೊಂಡನು.

ಕೆಲವು ದಿನಗಳು ದಾಟಿದ ಮೇಲೆ, ನಾನು ಬಂದರಿನ ಸಮಿಾಪ ಸಂಚರಿಸುವಾಗ ಒಂದು ಹಡಗು ದಡಕ್ಕೆ ಬಂದು ಸೇರಿತು. ಅದರೊಳಗಿನ ವರ್ತಕರು ತಮ್ಮ ಸರಕುಗಳ ಮೂಟೆಗಳನ್ನು ದಡದ ಮೇಲೆ ಇಳಿಸುತಿದ್ದರು. ಅವುಗಳಲ್ಲಿ ಕೆಲವು ಮೂಟೆಗಳ ಮೇಲೆ ನನ್ನ ಹೆಸರು ಬರೆದಿರುವುದನ್ನು ಕಂಡು ಆಶ್ಚರ್ಯಪಟ್ಟು, ಆ ಹಡಗಿನ ಯಜಮಾನನೊಡನೆ

"ಅಯ್ಯಾ, ಈ ಮೂಟೆಗಳು ಯಾರವು ?" ಎಂದು ಕೇಳಿದೆನು. ಅದಕ್ಕೆ ಅವನು "ಈ ಹಡಗಿನಲ್ಲಿ ಸಿಂದಬಾದನೆಂಬ ವರ್ತಕನು ವ್ಯಾಪಾರಕ್ಕಾಗಿ ಈ ಮೂಟೆಗಳನ್ನು ಹೇರಿದ್ದನು. ಅವನು ಸತ್ತುಹೋಗಿರುವುದರಿಂದ ಅವನ ಕುಲದವರು ಸಿಕ್ಕಿದರೆ, ಅವರಿಗೆ ಇವನ್ನು ಒಪ್ಪಿಸಬೇಕೆಂದು ತಂದಿದ್ದೇನೆ" ಎಂದನು. ಆ ಮಾತಿಗೆ ನಾನು "ಆ ಸಿಂದಬಾದನು ನಾನೇ" ಎಂದು ಹೇಳಿದೆನು. ಆಗ ಹಡಗಿನ ಯಜಮಾನನು "ಅದು ಹೇಗಾದೀತು? ಆ ಸಿಂದಬಾದನು ಸಮುದ್ರದ ಪಾಲಾಗಿ ಸತ್ತುಹೋದುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಅವನ ಒಡವೆಗಳನ್ನು ಅಪಹರಿಸುವುದಕ್ಕೆ ನೀನು ಸುಳ್ಳುಹೇಳುತ್ತಿಯಾ ?" ಎಂದು ಗದರಿಸಿದನು. ಆಗ ನಾನು ನನ್ನ ಕಥೆಯನ್ನು ಅವನಿಗೆ ವಿಸ್ತಾರವಾಗಿ ತಿಳಿಸಿದೆನು. ಅಷ್ಟರಲ್ಲಿ ಆ ಹಡಗಿನಲ್ಲಿದ್ದ ಮಿಕ್ಕ ವರ್ತಕರು ನನ್ನ ಮಾತಿನ ಸ್ವರದಿಂದ ನನ್ನನ್ನು ಗುರ್ತಿಸಿದರು. ಆ ಮೇಲೆ ಅವರೆಲ್ಲರೂ, "ನೀನು ಬದುಕಿದೆಯಾ ?" ಎಂದು ನನ್ನನ್ನು ತಬ್ಬಿಕೊಂಡು ನನ್ನ ಸರಕುಗಳನ್ನು ತಂದು ನನಗೆ ಒಪ್ಪಿಸಿದರು. ಆ ಸರಕುಗಳಲ್ಲಿ ಕೆಲವನ್ನು ನಾನು ಮಿಹ್ರಾಸ ಪ್ರಭುವಿಗೆ ಒಪ್ಪಿಸಲು, ಆತನು ನನ್ನೊಂದಿಗೆ ಇದ್ದ ಇತರ ವರ್ತಕರನ್ನೂ ಸತ್ಕರಿಸಿದನು. ಆತನ ಅಪ್ಪಣೆಯನ್ನು ಪಡೆದು ನನ್ನ ಉಳಿದ ಸರಕನ್ನು ಅಲ್ಲಿ ಮಾರಿ, ಅಲ್ಲಿಂದ ಗಂಧ, ಕರ್ಪೂರ, ಜಾಯಿಕಾಯಿ, ಪತ್ರೆ ಮೊದಲಾದ ಸುಗಂಧ ದ್ರವ್ಯಗಳನ್ನು ತೆಗೆದುಕೊಂಡು, ಉಳಿದ ವರ್ತಕರೊಂದಿಗೆ ನಮ್ಮ ದೇಶಕ್ಕೆ ಹಿಂತಿರುಗಿದೆನು. ಈ ಪ್ರಯಾಣದಿಂದ ಒಂದು ಲಕ್ಷ ವರಹಗಳು ನನಗೆ ಲಾಭವಾಗಿ ದೊರೆತವು. ಇದು ನನ್ನ ಮೊದಲನೆಯ ಯಾನದ ಸಮಾಚಾರ.

ಹೀಗೆಂದು ಹೇಳಿ ಆ ಧನಿಕನು ಆ ಕೂಲಿಯವನಿಗೆ ಸ್ವಲ್ಪ ದ್ರವ್ಯಗಳನ್ನು ಬಹುಮಾನವಾಗಿ ಕೊಟ್ಟು, ಮುಂದಿನ ಯಾನಗಳ ಕಥೆಯನ್ನು ಕೇಳುವುದಕ್ಕಾಗಿ ಮರುದಿನ ಅವನನ್ನು ತಿರಿಗಿ ಊಟಕ್ಕೆ ಬರಬೇಕೆಂದು ಹೇಳಿ, ಮನೆಗೆ ಕಳುಹಿಸಿದನು.

ಮಾರನೆಯ ದಿನ ಆ ಕೂಲಿಯವನು ಹೊತ್ತಿಗೆ ಸರಿಯಾಗಿ ಊಟಕ್ಕೆ ಬಂದನು. ಸಿಂದಬಾದನ ಗೆಳೆಯರೂ ಬಂದಿದ್ದರು.

ಆಗ ಸಿಂದಬಾದನು ಎರಡನೆಯ ಪ್ರಯಾಣದ ವೃತ್ತಾಂತವನ್ನು ಹೇಳತೊಡಗಿದನು : —

ಎರಡನೆಯ ಪ್ರಯಾಣ

ಕೆಲವು ದಿನ ನಮ್ಮ ಊರಲ್ಲಿ ಇದ್ದ ಮೇಲೆ, ಮರಳಿ ಕಡಲು ಪಯಣ ಮಾಡಬೇಕೆಂಬ ಬಯಕೆಯು ನನ್ನಲ್ಲಿ ಮೂಡಿತು. ನಾನು ನನ್ನ ಪರಿಚಿತ ರಾದ ಕೆಲಮಂದಿ ಹರದರೊಡನೆ ಒಂದು ಹಡಗನ್ನು ಬಾಡಿಗೆಗೆ ಗೊತ್ತುಮಾಡಿ, ಅದರಲ್ಲಿ ಸರಕನ್ನು ತುಂಬಿಸಿ, ಪ್ರಯಾಣಹೊರಟೆನು. ಕೆಲವು ದಿನಗಳಲ್ಲಿ ಹಡಗು ಒಂದು ದ್ವೀಪದ ಹತ್ತಿರಕ್ಕೆ ಬಂದು, ಅದು ಬಹು ಸುಂದರ ದ್ವೀಪವೆಂದು ತೋರಿದ್ದರಿಂದ ಅದನ್ನು ನೋಡಿಕೊಂಡು ಬರೋಣವೆಂದು ನೆನಸಿ, ನಾವು ಕೆಲವರು ಆ ದ್ವೀಪಕ್ಕೆ ಇಳಿದೆವು. ಬಹಳ ದೂರದ ವರೆಗೆ ಹೋಗಿ ನೋಡಿದರೂ, ಒಂದು ಪ್ರಾಣಿಯಾದರೂ ನಮ್ಮ ಕಣ್ಣಿಗೆ ಬೀಳಲಿಲ್ಲ. ನೋಡಬೇಕೆಂಬ ಕುತೂಹಲದಿಂದ ಎಲ್ಲರಿಗಿಂತ ಮುಂದಕ್ಕೆ ಹೋಗಿದ್ದ ನಾನು ಅಲ್ಲಿ ಒಂದು ಮರದ ಕೆಳಗೆ ಕುಳಿತು, ತಂದಿದ್ದ ತಿಂಡಿಯನ್ನು ತಿಂದುಕೊಂಡು ಆ ಮರಕ್ಕೆ ಹಾಗೆ ಒರಗಲಾಗಿ, ನನಗೆ ಅಲ್ಲಿಯೇ ಕಣ್ಣು ಕೂರಿತು. ಹೊತ್ತು ತಿಳಿಯಲೇ ಇಲ್ಲ. ನಿದ್ರೆ ಬಿಡಲೇ ಇಲ್ಲ. ನಾನು ಎಚ್ಚತ್ತು ಕಡಲು ದಡವನ್ನು ಹೋಗಿ ನೋಡಲಾಗಿ ಹಡಗು ನನ್ನನ್ನು ದಡ ದಲ್ಲಿಯೇ ಬಿಟ್ಟು ಮುಂದಕ್ಕೆ ಹೋಗುತಿತ್ತು. ನಾನು ಕಂಗೆಟ್ಟು ಗಟ್ಟಿಯಾಗಿ ಕೂಗಿ ಕರೆದೆನು. ತಲೆಗೆ ಕಟ್ಟಿದ ರುಮಾಲನ್ನು ಬಿಡಿಸಿ, ನಿಶಾನಿಮಾಡಿ ತೋರಿಸಿದೆನು. ಆದರೂ ಹಡಗು ಹಿಂದೆ ಬಾರದೆ ಹೋಯಿತು. ಆಗ ನಾನು ಬಾಯಿಬಿಟ್ಟು ಗೋಳಾಡಿದೆನು. ಇದ್ದುದು ಸಾಕು ಎಂದು ತಿಳಿಯದೆ ಹಣದಾಸೆಯಿಂದ ಕಡಲನ್ನು ದಾಟುವುದಕ್ಕೆ ಹೊರಟ ನನ್ನ ಅವಿವೇಕವನ್ನು ಕುರಿತು ಬಹಳವಾಗಿ ದುಃಖಿಸಿದೆನು. ಕಡೆಗೆ ದೇವರೇ ಗತಿಯೆಂದು ಮನಸ್ಸು ಗಟ್ಟಿಮಾಡಿಕೊಂಡು “ಈ ದೇಶವು ಹೇಗಿದೆ, ನೋಡೋಣ” ಎಂದು ಒಂದು ದೊಡ್ಡ ಮರವನ್ನು ಹತ್ತಿ ಸುತ್ತಲೂ ನೋಡಿದೆನು. ಎಲ್ಲಿ ನೋಡಿ ದರೂ ಆಕಾಶವೂ ನೀರೂ ಮಾತ್ರ ಕಾಣುತಿತ್ತು. ನೆಲದ ಕಡೆ ನೋಡು ವಾಗ ದೂರದಲ್ಲಿ ಒಂದು ಬಿಳಿಯ ಗುಂಡುಕಲ್ಲು ಬಿದ್ದ ಹಾಗೆ ಕಂಡಿತು. ಆ ವಸ್ತುವು ಚೆನ್ನಾಗಿ ಹೊಳೆಯುತಿತ್ತು. ಅದರ ಕಡೆಗೆ ಲಕ್ಷ್ಯವಿಟ್ಟು ಮರದಿಂದ ಇಳಿದು ಹೋದೆನು.

ಹತ್ತಿರ ಹೋಗಿ ನೋಡಿದಾಗ ಆ ಕಲ್ಲು ಬಹಳ ನುಣುಪಾಗಿತ್ತು. ಅದರ ಸುತ್ತಳತೆಯು ಸುಮಾರು ನೂರು ಗಜವಿತ್ತು. ಗುಂಡುಕಲ್ಲು ಇಷ್ಟು ಗುಂಡಗೆ ಮತ್ತು ಇಷ್ಟು ದೊಡ್ಡದು ಇದ್ದುದನ್ನು ನಾನು ಹುಟ್ಟಿದಾರಭ್ಯ ನೋಡಿರಲಿಲ್ಲ. ಅದನ್ನೇ ನೋಡುತ್ತಾ ನೋಡುತ್ತಾ ಒಂದೆರಡು ಸುತ್ತು ಬಂದೆನು. ಅಷ್ಟರಲ್ಲಿ ಸಾಯಂಕಾಲವಾಯಿತು. ಆಗ ಫಕ್ಕನೆ ಆಕಾಶದಲ್ಲಿ ದೊಡ್ಡ ಮೋಡ ಮುಚ್ಚಿದಂತೆ ಕತ್ತಲಾಯಿತು. ತಲೆ ಎತ್ತಿ ಮೇಲೆ ನೋಡುವಾಗ ಅತಿ ದೊಡ್ಡದಾದ ಒಂದು ಪಕ್ಷಿಯು ನನ್ನ ಕಡೆಗೆ ಹಾರಿ ಬರುವುದನ್ನು ಕಂಡೆನು. ಕೂಡಲೇ ನಾವಿಕರು ಹಿಂದೆ ಒಮ್ಮೆ ನನಗೆ ಹೇಳಿದ ಸಂಗತಿಯು ನೆನಪಿಗೆ ಬಂದು, ಆ ನುಣ್ಣಗಿನ ವಸ್ತುವು ಆ ಪಕ್ಷಿಯ ಮೊಟ್ಟೆಯೆಂದೂ, ಅದ್ಭುತಾಕಾರದ ಆ ಪಕ್ಷಿಯು ರೊಕ್ ಎಂಬ ಹೆಸರಿನ ಹಕ್ಕಿಯೆಂದೂ ನನಗೆ ಗೊತ್ತಾಯಿತು. ಇದ್ದ ಜೀವ ಹೋದ ಹಾಗಾಯಿತು. ನಾನು ಪಕ್ಷಿಯ ದೃಷ್ಟಿಗೆ ಬೀಳದಂತೆ ಆ ಮೊಟ್ಟೆಯ ಅಡಿಯಲ್ಲಿ ಅವಿತು ಕೊಳ್ಳುವಷ್ಟರಲ್ಲಿ ಆ ಹಕ್ಕಿಯು ಕಾವು ಕೊಡುವುದಕ್ಕೆ ಮೊಟ್ಟೆಯ ಮೇಲೆ ಬಂದು ಕುಳಿತುಕೊಂಡಿತು. ಅದರ ಒಂದೊಂದು ಕಾಲು ಒಂದು ಚಿಕ್ಕ ಮರದಷ್ಟು ಗಾತ್ರವಾಗಿತ್ತು. ಆ ರಾತ್ರಿಯನ್ನು ನಾನು ಭಯದಿಂದ ಹೇಗೋ ಕಳೆದೆನು. ಕಡೆಗೆ ಜನರಿಲ್ಲದ ಈ ದ್ವೀಪದಿಂದ ನನ್ನನ್ನು ಹೊತ್ತುಕೊಂಡು ಹೋಗುವುದಕ್ಕೆ ಈ ಹಕ್ಕಿಯೇ ಗತಿಯೆಂದು ತಿಳಿದು, ಆ ಪಕ್ಷಿಯ ಕಾಲಿಗೆ ನನ್ನ ರುಮಾಲಿನಿಂದ ನನ್ನ ಮೈಯನ್ನು ಬಿಗಿದು, ನನ್ನ ಎರಡು ಕೈಗಳಿಂದಲೂ ಆ ಪಕ್ಷಿಯ ಕಾಲುಗಳನ್ನು ಅಮುಕಿ ಹಿಡಿದುಕೊಂಡೆನು.

ಸೂರ್ಯೋದಯವಾದೊಡನೆ ಆ ಹಕ್ಕಿಯು ಮೊಟ್ಟೆಯಿಂದ ಎದ್ದು, ಬಾನಿನ ಕಡೆಗೆ ಹಾರಿತು. ಅದರೊಂದಿಗೆ ನಾನೂ ಮೇಲಕ್ಕೆ ಏರಿದೆನು. ಹಾಗೆ ಏರುವಷ್ಟಕ್ಕೆ ನನಗೆ ಕೆಳಗಿನ ನೆಲವು ಕಾಣಿಸದೆ ಹೋಯಿತು. ನಾನು ರುಮಾಲಿನಿಂದ ನನ್ನ ದೇಹವನ್ನು ಬಿಗಿಯದಿದ್ದರೆ, ಸ್ಮೃತಿತಪ್ಪಿ ಕೆಳಗೆ ಬಿದ್ದು ಸಾಯುತ್ತಿದ್ದೆನು.

ಪಕ್ಷಿಯು ಸ್ವಲ್ಪ ಹೊತ್ತು ಆಕಾಶದಲ್ಲಿ ಸಂಚರಿಸಿ, ಫಕ್ಕನೆ ಆ ಕಡೆಗೆ ಎರಗಿತು. ಮತ್ತು ನೆಲದ ಮೇಲೆ ಇದ್ದ ಅತಿ ದೊಡ್ಡದಾದ ಒಂದು ಹೆಬ್ಬಾವನ್ನು ಕಂಡು ಉಕ್ಕಿನಂತಿದ್ದ ತನ್ನ ಕೊಕ್ಕಿನಿಂದ ಅದನ್ನು ಕಚ್ಚಿ ಹಿಡಿದುಕೊಂಡಿತು. ನಾನು ಬಿಗಿದ ಕಟ್ಟನ್ನು ತಡಮಾಡದೆ ಬಿಚ್ಚಿಕೊಂಡೆನು.

ಪಕ್ಷಿಯು ಹಾವಿನೊಂದಿಗೆ ಮರಳಿ ಆಕಾಶಕ್ಕೆ ಹಾರುವಷ್ಟರಲ್ಲಿ ನಾನು ಜಾರಿ ನೆಲದ ಮೇಲೆ ಬಿದ್ದೆನು.

ಈ ರೊಕ್ ಪಕ್ಷಿಯು ಇಳಿದು ಬಂದ ಸ್ಥಳವು ಒಂದು ತಗ್ಗು ಪ್ರದೇಶ. ಅದರ ಸುತ್ತಲೂ ಎತ್ತರವಾದ ಬೆಟ್ಟಗಳ ಸಾಲು ಮುಚ್ಚಿ ಕೊಂಡಿದ್ದು, ಈ ಹಳ್ಳಪ್ರದೇಶದಿಂದ ಪಾರಾಗುವುದೇ ಕಷ್ಟವೆಂದು ತೋರಿತು. ನಾನು ಅತ್ತಿತ್ತ ಸಂಚರಿಸುವಾಗ ಈ ಹಳ್ಳಪ್ರದೇಶದಲ್ಲಿ ಹಕ್ಕಿಯು ಎತ್ತಿ ಕೊಂಡ ಬಗೆಬಗೆಯ ಹೆಬ್ಬಾವುಗಳು ತುಂಬಾ ಇವೆ ಎಂದು ಗೊತ್ತಾಯಿತು. ಅವು ಆ ಹಕ್ಕಿಗಳಿಗೆ ಹೆದರಿ ಹಗಲಿನಲ್ಲಿ ಸಂಚಾರಮಾಡದೆ ರಾತ್ರಿಯಲ್ಲಿ ಬೆಟ್ಟ ಬದಿಯಲ್ಲಿ ಗುಹೆಗಳಿಂದ ಹೊರಕ್ಕೆ ಹೊರಡುತಲಿದ್ದುವು. ಆ ಹೆಬ್ಬಾವುಗಳು ಒಂದು ಆನೆಯನ್ನು ಕೂಡಾ ಗಬಕ್ಕನೆ ನುಂಗುವಂಥವು ಗಳಾಗಿದ್ದುವು. ಇವುಗಳ ಬಾಯಿಯಿಂದ ತಪ್ಪಿಸಿಕೊಂಡು ಹೋಗುವುದು ನನಗೆ ಅಸಾಧ್ಯವಾಗಿ ತೋರಿತು. ಆ ಪ್ರದೇಶದಲ್ಲಿ ಅಲ್ಲಲ್ಲಿ ತುಂಬಾ ನವ ರತ್ನಗಳು ಬಿಡಿಬಿಡಿಯಾಗಿ ನೆಲದ ಮೇಲೆ ಬಿದ್ದು ಹೊಳೆಯುತಿದ್ದುವು. ಇದು ನವರತ್ನಗಳ ಗನಿಯೆಂದು ತಿಳಿಯಿತು. ಈ ರತ್ನಗಳಲ್ಲಿ ವಜ್ರ, ಕೆಂಪು, ಪಚ್ಚೆ ಕಲ್ಲುಗಳೇ ಯಥೇಷ್ಟವಾಗಿದ್ದುವು. ಅವುಗಳನ್ನು ನೋಡುತ್ತಾ ನಾನು ಜೀವದಾಸೆಯನ್ನು ತೊರೆದು ಅತ್ತಿತ್ತ ಓಡಾಡಿ ಬೇಸತ್ತೆನು. ಆದು ದರಿಂದ ನನ್ನ ಬುತ್ತಿಯಲ್ಲಿ ಒಂದಿಷ್ಟನ್ನು ತಿಂದು, ಒಂದು ಕಲ್ಲಿನ ಮರೆಯಲ್ಲಿ ಕುಳಿತಿದ್ದೆನು. ನನಗೆ ಅಲ್ಲಿಯೇ ಗಾಢನಿದ್ರೆ ಹತ್ತಿತು. ನನ್ನ ಪಕ್ಕದಲ್ಲಿ ಏನೋ ಮೇಲಿನಿಂದ ಧೊಪ್ಪನೆ ಬಿದ್ದುದನ್ನು ಕೇಳಿ ಎಚ್ಚರವಾದೆನು. ಅಂಥಾ ತುಂಡುಗಳು ನನ್ನ ಸುತ್ತಲೂ ಬೀಳತೊಡಗಿದುವು. ನೋಡಿದಾಗ ಅವು ಮಾಂಸದ ಚೂರುಗಳಾಗಿದ್ದುವು. ಆಗ ನಾವಿಕರು ಹಿಂದೆ ಹೇಳಿದ ಮಾತು ನೆನಪಿಗೆ ಬಂತು. ವರ್ತಕರು ಈ ನವರತ್ನದ ಗನಿಯಿಂದ ರತ್ನಗಳನ್ನು ಎತ್ತಿಕೊಳ್ಳುವುದಕ್ಕೆ ಬೆಟ್ಟಗಳಿಂದ ಇಳಿಯಲಾರದೆ ಬಾಡಿನ ಚೂರುಗಳನ್ನು ಬಿಸಾಡಲು ಆ ಚೂರುಗಳನ್ನು ತಿನ್ನುವ ಆಸೆಯಿಂದ ಬೆಟ್ಟದ ಬದಿಯಲ್ಲಿರುವ ಹೆಗ್ಗಿಡುಗಗಳು ಬರುತ್ತವೆಂಬದು ನನಗೆ ಗೊತ್ತಾ ಯಿತು. ಆ ಬಾಡಿನ ಹೋಳುಗಳನ್ನೂ ಅವುಗಳಿಗೆ ಅಂಟಿಕೊಂಡಿರುವ ರತ್ನದ ಚೂರುಗಳನ್ನೂ ಎತ್ತಿಕೊಂಡು, ಈ ಹೆಗ್ಗಿಡುಗಗಳು ಬೆಟ್ಟಗಳ ಮೇಲಣ ಬಂಡೆಕಲ್ಲುಗಳ ಮೇಲೆ ಕುಳಿತುಕೊಂಡಾಗ, ಈ ವರ್ತಕರು

ಅವನ್ನು ಬೆದರಿಸಿ ಓಡಿಸಿ, ಮಾಂಸಕ್ಕೆ ಅಂಟಿಕೊಂಡಿದ್ದ ನವರತ್ನಗಳನ್ನು ಚೀಲಗಳಲ್ಲಿ ತುಂಬಿಸಿಕೊಂಡು ಹೋಗುತಿದ್ದರು ಎಂದು ನಾನು ಹಿಂದೆ ನಾವಿಕರಿಂದ ಕೇಳಿದ್ದೆನು.

ನಾನು ನೋಡುತ್ತಿರುವಷ್ಟಕ್ಕೆ ಹೆಗ್ಗಿಡುಗಗಳು ಬಂದು ಆ ಮಾಂಸ ಖಂಡಗಳ ಮೇಲೆ ಎರಗಿದುವು. ಈ ಹಳ್ಳಪ್ರದೇಶದಿಂದ ತಪ್ಪಿಸಿಕೊಂಡು ಹೊರಗೆ ಹೋಗಲಿಕ್ಕೆ ಒಂದು ಉಪಾಯವು ನನಗೆ ಮನಸ್ಸಿಗೆ ಹೊಳೆಯಿತು. ನಾನು ಬೇಗಬೇಗನೆ ಅಲ್ಲಿರುವ ನವರತ್ನದ ತುಂಡುಗಳಲ್ಲಿ ಕೆಲವು ದೊಡ್ಡ ದೊಡ್ಡ ತುಂಡುಗಳನ್ನು ಆಯ್ದುಕೊಂಡು, ನನ್ನ ಚೀಲದಲ್ಲಿ ತುಂಬಿಸಿ, ಆ ಮಾಂಸಚೂರುಗಳಲ್ಲಿ ದೊಡ್ಡದೊಂದು ಚೂರನ್ನು ನನ್ನ ಬೆನ್ನಿಗೆ ಬಿಗಿಯಾಗಿ ಕಟ್ಟಿಕೊಂಡು ಬೋರಲಬಿದ್ದುಕೊಂಡೆನು. ಒಂದು ಹೆಗ್ಗಿಡುಗನು ಆ ಮಾಂಸದ ಚೂರಿಗೆ ಎರಗಿ, ಅದರೊಂದಿಗೆ ನನ್ನನ್ನೂ ಎತ್ತಿಕೊಂಡು ಅಂತರಿಕ್ಷಕ್ಕೆ ಹಾರಿತು. ಆ ಮೇಲೆ ಅದು ಬೆಟ್ಟದ ಕೋಡುಗಲ್ಲಿನ ಮೇಲೆ ಕುಳಿತುಕೊಳ್ಳುವಷ್ಟರಲ್ಲಿ ಹಲವು ಜನರು ಗದ್ದಲ ಹಚ್ಚಿ ಆ ಹೆಗ್ಗಿಡುಗನನ್ನು ಅಲ್ಲಿಂದ ಅಟ್ಟಿಬಿಟ್ಟರು. ಆಗ ಅವರಲ್ಲಿ ಕೆಲವರು ನಾನು ಬಿದ್ದುಕೊಂಡಿರುವಲ್ಲಿಗೆ ಬಂದು ಅತ್ಯಾಶ್ಚರ್ಯಪಟ್ಟರು. ಆ ಮೇಲೆ ನಾನು ಅವರಿಗೆ ಅತಿ ವಿನಯದಿಂದ “ಅಯ್ಯಾ! ನಿಮಗೆ ಈ ಹಕ್ಕಿಯಿಂದ ಸಿಗುವ ರತ್ನಗಳಿಗಿಂತಲೂ ದೊಡ್ಡದಾದವುಗಳನ್ನು ನಾನು ನಿಮಗೆ ಕೊಡುವೆನು. ಒಮ್ಮೆ ನಿಮ್ಮೊಂದಿಗೆ ನನ್ನನ್ನು ಈ ಭಯಂಕರವಾದ ಸ್ಥಳದಿಂದ ಕೊಂಡುಹೋಗಿರಿ” ಎಂದೆನು. ನನ್ನ ಚೀಲದಲ್ಲಿ ತುಂಬಿಕೊಂಡಿದ್ದ ರತ್ನಗಳಲ್ಲಿ ಒಂದೆರಡನ್ನು ಅವರಿಗೆ ತೋರಿಸಿದೆನು. ಅವರು ತುಂಬಾ ಸಂತೋಷಪಟ್ಟು, ಅವರ ಜತೆಯವರು ಇಳಿದು ಬಿಡಾರಮಾಡಿದ್ದಲ್ಲಿಗೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ನನ್ನ ವೃತ್ತಾಂತವನ್ನು ನಾನು ಅವರಿಗೆ ತಿಳಿಸಿದಾಗ ಅವರು ನನ್ನ ಧೈರ್ಯಚಾತುರ್ಯಗಳನ್ನು ಕಂಡು ಚಕಿತರಾದರು.

ಆ ಮೇಲೆ ಆ ವರ್ತಕರೆಲ್ಲರಿಗೂ ಒಂದು ಮಾವಿನ ಹಣ್ಣಿನಷ್ಟು ಗಾತ್ರದ ಒಂದೊಂದು ವಜ್ರದ ಹರಳನ್ನು ಪ್ರತಿ ಒಬ್ಬರಿಗೆ ನಾನು ಉಡುಗೆರೆಯಾಗಿ ಕೊಟ್ಟು, ಅವರೊಂದಿಗೆ ಒಂದೆರಡು ದಿನ ಸುಖವಾಗಿದ್ದು, ಅನಂತರ ನಾವೆಲ್ಲರೂ ಹಡಗು ಹತ್ತಿ ಪ್ರಯಾಣಮಾಡಿದೆವು. ಅಲ್ಲಿಂದ

ರೋಕಪವೆಂಬ ಒಂದು ದ್ವೀಪವನ್ನು ಸೇರಿದೆವು. ಅಲ್ಲಿ ಒಂದು ವಿಧವಾದ ಮರದ ರಸದಿಂದ ಕರ್ಪೂರವನ್ನು ಮಾಡುತ್ತಾರೆ. ಆ ದ್ವೀಪದಲ್ಲಿ ಗಂಡ ಮೃಗವೆಂಬ ಒಂದು ಅದ್ಭುತ ಆಕಾರದ ಪ್ರಾಣಿ ಇದೆ. ಅದರ ಮೂಗಿನ ಮೇಲೆ ದಪ್ಪವಾದ ಒಂದೇ ಕೊಂಬು ಇದೆ. ಈ ಪ್ರಾಣಿಯು ದೊಡ್ಡ ಆನೆಯೊಡನೆಯೂ ಜಗಳವಾಡಿ ಅದರ ಹೊಟ್ಟೆಯನ್ನು ಕೊಂಬಿನಿಂದ ಬಗೆದು, ಹಾಗೆಯೇ ಎತ್ತಿಕೊಂಡು ಹೋಗುತ್ತದಂತೆ! ಹಾಗೆ ಒಯ್ಯು ವಾಗ ಆನೆಯ ರಕ್ತವೂ ಕೊಬ್ಬೂ ತನ್ನ ಕಣ್ಣುಗಳಲ್ಲಿ ತುಂಬಿಕೊಂಡು, ದಿಕ್ಕುತೋರದೆ ಕುರುಡಾಗಿ ಆ ಗಂಡಮೃಗವು ನೆಲದ ಮೇಲೆ ಬಿದ್ದು ಕೊಳ್ಳುತ್ತದಂತೆ! ಆಗ ರೋಕಪಕ್ಷಿಯು ಈ ಎರಡೂ ಪ್ರಾಣಿಗಳನ್ನು ತನ್ನ ಕೊಕ್ಕಿನಿಂದಲೂ ಉಗುರುಗಳಿಂದಲೂ ಹಿಡಿದು ಎತ್ತಿ ಹಾರಿ ಹೋಗಿ ತನ್ನ ಮರಿಗಳಿಗೆ ಅವನ್ನು ತಿನ್ನಿಸುವುದಂತೆ!

ಇಂಥ ವಿಚಿತ್ರ ಸಮಾಚಾರಗಳನ್ನು ನೋಡುತ್ತಾ ಕೇಳುತ್ತಾ ನಾನು ನನ್ನ ಊರುಮನೆಯನ್ನು ಮುಟ್ಟಿದೆನು. ಸುರಕ್ಷಿತವಾಗಿ ಬಂದು ಸೇರಿ ದುದಕ್ಕಾಗಿ ಬಡಬಗ್ಗರಿಗೆ ದಾನಧರ್ಮಗಳನ್ನು ಮಾಡಿ ಕೆಲವು ಕಾಲ ಸುಖ ವಾಗಿದ್ದೆನು.

ಮೂರನೆಯ ಪ್ರಯಾಣ

ನಾನು ಕೆಲವು ಸಮಯದ ವರೆಗೆ ನಮ್ಮ ಮನೆಯಲ್ಲಿಯೇ ಇದ್ದೆನು. ಆದರೆ ಯೌವನಸ್ಥನಾಗಿದ್ದುದರಿಂದ ಹಿಂದಿನ ಕಷ್ಟಗಳನ್ನು ಬೇಗನೇ ಮರೆತು, ಸುಮ್ಮನೆ ಮನೆಯಲ್ಲಿ ಕಾಲು ಮೇಲೆ ಕಾಲು ಹಾಕಿ ಕುಳಿತಿರ ಲಾರದೆ, ದ್ವೀಪಾಂತರಗಳಲ್ಲಿ ವ್ಯಾಪಾರ ಮಾಡುವ ಆತುರದಿಂದ ಮತ್ತೊಮ್ಮೆ ಹೊರಟೆನು. ಮೊದಲು ಬಾಲ್ಸೋರಕ್ಕೆ ಹೋದೆನು. ಅಲ್ಲಿ ನನಗೆ ಕೆಲವು ವರ್ತಕರು ಗಂಟುಬಿದ್ದರು. ಅವರೊಡನೆ ನಾನು ಒಂದು ಹಡಗನ್ನು ಬಾಡಿಗೆಗೆ ಮಾಡಿಕೊಂಡು, ಸರಕನ್ನು ತುಂಬಿಸಿ ಹೊರಟೆನು. ನಾವು ಸಮುದ್ರಮಧ್ಯದಲ್ಲಿ ಕೆಲವು ದಿನ ಪ್ರಯಾಣ ಮಾಡುವಷ್ಟರಲ್ಲಿ ಕಠಿಣವಾದ ಬಿರುಗಾಳಿಯು ಎದ್ದಿತು. ನಮ್ಮ ಹಡಗು ದಾರಿತಪ್ಪಿ ಅಲೆದಾಡುತ್ತಿರಲು ನಾವು ಒಂದು ದ್ವೀಪದ ಸಮೀಪ ಲಂಗರುಹಾಕಬೇಕಾಗಿ ಬಂತು. ಹಡಗಿನ ಕಪ್ತಾನನು ಬೇರೆ ಉಪಾಯ ಕಾಣದೆ ಅಲ್ಲಿ ಹಾಯಿಪಟಗಳನ್ನು ಎತ್ತಿಕಟ್ಟಿ ಹಡಗನ್ನು ನಿಲ್ಲಿಸಿದನು. ಆ ದ್ವೀಪದಲ್ಲಿ ಒಂದು ಜಾತಿಯ

ಕಾಡುಜನರು ವಾಸವಾಗಿದ್ದರು. ಅವರು ಕುಳ್ಳರು. ಅವರಿಗೆ ಮೈತುಂಬಾ ಕೆಂಪು ರೋಮ; ಅವರು ಕೆಂಪಿರುವೆಗಳ ದಂಡಿನಂತೆ ಬಂದು ನಮ್ಮ ಹಡಗನ್ನು ಮುತ್ತಿಕೊಂಡರು. ಅವರಲ್ಲಿ ಒಬ್ಬರಾದರೂ ಎರಡು ಅಡಿಗಿಂತ ಮಿಕ್ಕಿ ಎತ್ತರವಾಗಿರಲಿಲ್ಲ. ತಮ್ಮೊಳಗೆ ಏನೇನೊ ಹೇಳುತ್ತಾ ಹಡಗಿನ ಮೇಲೆ ಬಂದರು. ಅವರು ಏನು ಅನ್ನುತಿದ್ದರೆಂದು ನಮಗೆ ಗೊತ್ತಾಗಲಿಲ್ಲ. ಅವರನ್ನು ನೋಡಿ ಬೆರಗಾದೆವು. ಅವರು ಹಾಯಿಯ ಕಂಬಗಳನ್ನು ಇರುವೆಗಳಂತೆ ಏರಿ ಹಗ್ಗಗಳನ್ನು ಕಡಿದುಹಾಕಿದರು. ಲಂಗರಿನ ಹಗ್ಗವನ್ನು ಕಡಿದು, ಹಡಗಿಗೆ ಬೇರೆ ಹಗ್ಗವನ್ನು ಕಟ್ಟಿ ಹಡಗನ್ನು ದಡಕ್ಕೆ ಎಳೆದು ಬಿಟ್ಟರು. ಆ ಮೇಲೆ ನಮ್ಮನ್ನು ಹಡಗಿನಿಂದ ಇಳಿಸಿಬಿಟ್ಟು, ಕೆಲವರು ಆ ಹಡಗನ್ನು ದೂರದ ಇನ್ನೊಂದು ದ್ವೀಪಕ್ಕೆ ಎಳೆದುಕೊಂಡು ಈಸಿ ಹೋದರು.

ನಮ್ಮನ್ನು ದಡಕ್ಕೆ ಇಳಿಸಿದವರು ನಮ್ಮನ್ನು ಅಲ್ಲಿಯೇ ಬಿಟ್ಟು, ತಂಡವಾಗಿ ಎಲ್ಲಿಗೋ ಹೋಗಿಬಿಟ್ಟರು. ನಾವು ದಡದಲ್ಲಿಯೇ ಉಳಿಯು ಲಾರದೆ ಪ್ರಾಣದ ಆಸೆಗಾಗಿ ಏನು ಮಾಡೋಣ ಎಂದು ಯೋಚಿಸುತ್ತಾ ಮುಂದೆ ನಡೆದೆವು. ಸ್ವಲ್ಪ ದೂರ ಹೋಗಲು ಅರಮನೆಯಂತೆ ಕಾಣುವ ಒಂದು ದೊಡ್ಡ ಕಟ್ಟಡವು ಕಣ್ಣಿಗೆ ಕಾಣಿಸಿತು. ನಾವು ಅದರ ಹೆಬ್ಬಾಗಿಲಿಗೆ ಬಂದು ಅದನ್ನು ತಳ್ಳಲಾಗಿ ಅದು ಮೆತ್ತಗೆ ತೆರೆಯಿತು. ಒಳಗೆ ದೊಡ್ಡ ದೊಂದು ಅಂಗಳವಿತ್ತು. ಬಾಗಿಲು ತೆರೆದೊಡನೆ ಅದರ ಒಳಗಿನ ಸ್ಥಿತಿಯು ಬಹಳ ಭಯಂಕರವಾಗಿ ಕಾಣಿಸಿತು. ಅದರ ಒಂದು ಕಡೆಯಲ್ಲಿ ಮನುಷ್ಯರ ಮೂಳೆಗಳು ರಾಶಿರಾಶಿಯಾಗಿ ಬಿದ್ದಿದ್ದುವು. ಮತ್ತೊಂದು ಮೂಲೆಯಲ್ಲಿ ದೊಡ್ಡದೊಂದು ಬೆಂಕಿಯ ಅಗ್ಗಿಷ್ಟಿಕೆ ಇತ್ತು. ಅದರ ಬಳಿಯಲ್ಲಿ ಕವೆ ಕೋಲಿನ ಮೇಲೆ ಉದ್ದವಾದ ಕಬ್ಬಿಣದ ಸಲಾಕಿಗಳೂ ಭರ್ಚಿಗಳೂ ಇದ್ದುವು. ಇದನ್ನು ನೋಡಿದೊಡನೆ ನಮಗೆ ಕಣ್ಣು ಕತ್ತಲೆ ಬಂತು. ನಿಲ್ಲಲಿಕ್ಕೆ ತ್ರಾಣವಿಲ್ಲದೆ ನಾವು ಅಲ್ಲೇ ಕೆಲವು ಹೊತ್ತು ಬಿದ್ದುಬಿಟ್ಟೆವು.

ನಾವು ಮೂರ್ಛೆ ತಿಳಿದಾಗ ಸಂಜೆ ದಾಟಿ ಹೋಗಿತ್ತು. ಆಗ ಒಳ ಮನೆಯಿಂದ ಭಯಂಕರ ಪುರುಷನೊಬ್ಬನು ಹೊರಗೆ ಬಂದನು. ಅವನು ಒಂದು ತಾಳೇಮರದಷ್ಟು ಎತ್ತರವಿದ್ದನು. ಅವನಿಗೆ ಹಣೆಯಲ್ಲಿ ಒಂದೇ ಕಣ್ಣು. ಸುಡುವ ಕೆಂಡದಂಥಾ ಕೆಂಗಣ್ಣು. ಅವನ ಕೋರೆ ಹಲ್ಲುಗಳು

ಆನೆಯ ದಾಡೆಗಳಂತೆ ಉದ್ದವಾಗಿಯೂ ಮೊನಚಾಗಿಯೂ ಇದ್ದುವು. ಅವು ತುಟಿಗಳ ನಡುವಿನಿಂದ ಹೊರಬಿದ್ದು ಕಾಣಿಸುತ್ತಿದ್ದುವು. ಅವನ ಕಿವಿಗಳು ಬಲು ದಪ್ಪವಾಗಿ ಗೆರಸೆಯಂತೆ ಇದ್ದುವು. ಅವನ ಕೈಬೆರಳು ಗಳಲ್ಲಿ ಹುಲಿಯ ಉಗುರಿನಂತೆ ಕೂರಾದ ಉಗುರುಗಳು. ಈ ರಾಕ್ಷಸನನ್ನು ಕಂಡಾಗ ನಮ್ಮ ಪ್ರಾಣವೇ ಹಾರಿಹೋಯಿತು. ನಾವು ಭಗವಂತನನ್ನು ಪ್ರಾರ್ಥಿಸುತ್ತಾ ಅವನ ಕಾಲಬುಡಕ್ಕೆ ಬಿದ್ದು ಹೊರಳಾಡಿದೆವು. ಅವನು ಅದನ್ನು ಲಕ್ಷಿಸದೆ ಒಂದು ಕೈಯಿಂದ ಒಬ್ಬೊಬ್ಬನನ್ನೇ ಎತ್ತಿ, ತನ್ನ ಕಣ್ಣೆದುರಿಗೆ ಹಿಡಿದು, ಚೆನ್ನಾಗಿ ನೋಡಿ ಕೆಳಗೆ ಬಿಟ್ಟನು. ಆ ಮೇಲೆ ನಮ್ಮವರಲ್ಲಿ ಬಲಿಷ್ಠನೂ ಪುಷ್ಟನೂ ಆಗಿದ್ದ ಹಡಗಿನ ಯಜಮಾನನನ್ನು ಹಿಡಿದು, ಭರ್ಚಿಯಿಂದ ತಿವಿದು ಕೊಂದು, ಅವನ ಹೆಣವನ್ನು ಅಲ್ಲಿರುವ ಅಗ್ಗಿಷ್ಟಿಕೆಯಲ್ಲಿ ಸ್ವಲ್ಪ ಸುಟ್ಟು, ಗವಗವನೆ ತಿಂದುಬಿಟ್ಟನು. ತರುವಾಯ ಒಳಮನೆಗೆ ಹೋಗಿ ಬಿದ್ದುಕೊಂಡು ಗೊರಿಕೆಹೊಡೆಯುತ್ತಾ ಮಲಗಿದನು. ಈ ಗೊರಿಕೆಯು ಬಿರುಗಾಳಿಯ ರಭಸದಂತೆ ಅಂಗಳದಲ್ಲಿದ್ದ ನಮಗೆ ಕೇಳಿಸುತಿತ್ತು.

ಅವನು ಒಳಗೆ ಹೋದ ಮೇಲೆ ನಾವು ಕಣ್ಣಿಗೆ ನಿದ್ದೆಬಾರದೆ, ಆ ಬೆಂಕಿಯ ಸುತ್ತಲೂ ಚಳಿಕಾಸಿಕೊಳ್ಳುತ್ತಾ ನಮ್ಮ ದುರವಸ್ಥೆಯನ್ನು ಕುರಿತು ಚಿಂತಿಸುತ್ತಾ "ಮುಂದೇನು ಗತಿ ?" ಎಂದು ಮೆಲ್ಲಗೆ ಚರ್ಚಿಸುತ್ತಾ ಕುಳಿತೆವು. ಬೆಳಕು ಹರಿಯಿತು. ಆಗ ನಾವು ಮನೆಯಿಂದ ಹೊರಬಿದ್ದು ಅಲ್ಲಲ್ಲಿ ಸುತ್ತಾಡಿ ಹಣ್ಣುಹಂಪಲುಗಳನ್ನು ತಿಂದು ಹಸಿವನ್ನು ನೀಗಿದೆವು. ಸಾಯಂಕಾಲವಾಗಲು ಕಾಡುಮೃಗಗಳ ಭೀತಿಗಾಗಿ ಮರಳಿ ಆ ಅರಮನೆ ಯನ್ನೇ ಸೇರಿದೆವು.

ಆ ದಿನವೂ ಆ ರಾಕ್ಷಸನು ನಮ್ಮವರಲ್ಲಿ ಇನ್ನೊಬ್ಬನನ್ನು ಹಿಡಿದು ಕೊಂಡು ಬೇಯಿಸಿ ತಿಂದು ಒಳಗೆ ಹೋಗಿ ಮಲಗಿದನು. ಆಗ ನಾವು ಬೆಂಕಿಯ ಸುತ್ತಲೂ ಕುಳಿತು "ದಿನಕ್ಕೆ ಒಬ್ಬೊಬ್ಬನೇ ಈ ರಾಕ್ಷಸನಿಗೆ ಬಲಿ ಬೀಳುವುದಾಯಿತಲ್ಲ!" ಎಂದು ಮರುಗಿದೆವು. ಕಡೆಗೆ ಫಕ್ಕನೆ ನನ ಗೊಂದು ಆಲೋಚನೆ ಹೊಳೆಯಿತು. ಆ ದ್ವೀಪದಲ್ಲಿ ಬಿದಿರುಮೆಳೆಗಳು ತುಂಬಾ ಇದ್ದುವು. "ಈ ಬಿದಿರುಗಳನ್ನು ಕಡಿದು ತೆಪ್ಪಕಟ್ಟಿ ಕಡಲಿಗೆ ಹಾಕಿ ಅದರಲ್ಲಿ ಕುಳಿತುಕೊಳ್ಳೋಣ. ತೆಪ್ಪವು ಬೇಕಾದಲ್ಲಿ ತೇಲಿಹೋಗಲಿ,

ಎಲ್ಲಿಯಾದರೂ ಒಂದು ಹಡಗನ್ನು ಕಂಡರೆ, ನಿಶಾನಿ ತೋರಿಸಿ ಕರೆಯ ಬಹುದು. ಇಲ್ಲವಾದರೆ ಈ ರಾಕ್ಷಸನ ಬಾಯಲ್ಲಿ ಬಿದ್ದು ಸಾಯು ವುದಕ್ಕಿಂತ ಕಡಲಲ್ಲಿ ಬಿದ್ದು ಪ್ರಾಣಕಳಕೊಳ್ಳುವುದು ಲೇಸಲ್ಲವೇ" ಎಂದು ನಾನು ಅವರಿಗೆ ಸೂಚಿಸಿದೆನು. ಅವರೆಲ್ಲರೂ ಒಪ್ಪಿಕೊಂಡು ತೆಪ್ಪಗಳನ್ನು ಕಟ್ಟಿದರು. ಆದರೆ ರಾಕ್ಷಸನು ನಮ್ಮ ಬೆನ್ನು ಹಿಡಿಯುದ ಹಾಗೆ ನಾವು ಇನ್ನೊಂದು ಹಂಚಿಕೆಯನ್ನೂ ಮಾಡಿದೆವು. ಕವೆಕೋಲಿನ ಮೇಲೆ ಇದ್ದ ಒಂದು ಸಲಾಕಿಯನ್ನು ಬೆಂಕಿಯ ಕೆಂಡದಲ್ಲಿ ಕೆಂಪಗೆ ಕಾಸಿ, ಅದನ್ನು ನಾವು ಐದಾರು ಜನರು ಮೆಲ್ಲಗೆ ಎತ್ತಿಕೊಂಡು, ನಿದ್ರೆಯಲ್ಲಿ ಗೊರಿಕೆ ಹೊಡೆಯುತಿದ್ದ ರಾಕ್ಷಸನ ಬಳಿಗೆ ಹೋಗಿ, ಕಣ್ಣಿಗೆ ಸರಿಯಾಗಿ ಹಿಡಿದು ಕಾಯಿಸಿಟ್ಟೆವು. ಆಗ 'ಚೊಂಯ್' ಎಂದು ನೀರು ಬಂದು ಅವನ ಕಣ್ಣು ಕುರುಡಾಯಿತು. ಕೂಡಲೇ ಅವನು ಸಿಡಿಲಿನಂತೆ ಗರ್ಜಿಸುತ್ತ ನಮ್ಮನ್ನು ಹಿಡಿಯುವುದಕ್ಕೆ ಓಡಿಬಂದನು. ನಾವು ಅವನನ್ನು ತಪ್ಪಿಸಿಕೊಂಡು ಸಮುದ್ರದ ದಡಕ್ಕೆ ಓಡಿದೆವು. ಆ ತೆಪ್ಪಗಳನ್ನು ಹಿಡಿದು, ಒಂದೊಂದರ ಮೇಲೆ ಮೂರು ಮೂರು ಮಂದಿ ಏರಿದೆವು. ಅಷ್ಟರಲ್ಲಿ ಆ ಕುರುಡು ರಾಕ್ಷಸನು ಎಲ್ಲಿಂದಲೋ ಭೂತಕಾಯರಾದ ಇನ್ನಿಬ್ಬರನ್ನು ಕರೆದುಕೊಂಡು ದಡಕ್ಕೆ ಬಂದನು. ಅವರು ದೊಡ್ಡ ದೊಡ್ಡ ಗುಂಡುಕಲ್ಲುಗಳನ್ನು ಎತ್ತಿ ತೆಪ್ಪಗಳ ಮೇಲೆ ಬಿಸಾಡ ತೊಡಗಿದರು. ಕಲ್ಲು ಬಿದ್ದು ನಾನು ಕುಳಿತ ತೆಪ್ಪ ವಿನಾ ಇತರ ತೆಪ್ಪಗಳು ಸಮುದ್ರದಲ್ಲಿ ಮುಳುಗಿಹೋದವು. ನನ್ನ ತೆಪ್ಪದಲ್ಲಿರುವ ನಾವು ಮೂವರು ಮಾತ್ರ ತಪ್ಪಿಸಿಕೊಂಡು ಸಮುದ್ರದಲ್ಲಿ ಮುಂದರಿಸಿದೆವು. ಆದರೇನು ಮಾಡೋಣ! ರಾಕ್ಷಸರ ಬಾಯಿಯಿಂದ ತಪ್ಪಿದೆವು ಸರಿ. ಆದರೆ ತಿನ್ನಲು ಅನ್ನವಿಲ್ಲದೆ, ಕುಡಿಯಲು ಸಿಹಿನೀರಿಲ್ಲದೆ, ನಮ್ಮ ಕಡೆಕಾಲ ಬಂದಂತೆ ತೋರುತಿದ್ದಾಗ ಬೆಟ್ಟದಂಥಾ ಅಲೆಗಳು ತೆಪ್ಪವನ್ನು ತೇಲಿಸಿಕೊಂಡು ನಮ್ಮನ್ನು ಒಂದು ದ್ವೀಪಕ್ಕೆ ತಂದುಹಾಕಿದುವು. ನಾವು ದಡ ಸೇರಿಕೊಂಡೆವು; ಆದರೆ ದಣಿದವರಾದ್ದರಿಂದ ಅಲ್ಲಿಯೆ ಒಂದು ಮರದ ಬುಡದಲ್ಲಿ ಮಲಗಿ ಸ್ವಲ್ಪ ಹೊತ್ತು ನಿದ್ರೆ ಮಾಡಿದೆವು. ಸರಸರನೆ ಏನೋ ಹರಿದುಬರುವ ಸದ್ದು ಕೇಳಿ ಫಕ್ಕನೆ ನಮಗೆ ಎಚ್ಚರವಾಯಿತು. ಅಷ್ಟರಲ್ಲಿ ಒಂದು ಅಡಕೆಯ ಮರದಷ್ಟು ಉದ್ದದ ಒಂದು ಹೆಬ್ಬಾವು ನಮ್ಮಲ್ಲಿ ಒಬ್ಬನನ್ನು ಸುತ್ತಿಕೊಂಡು, ಅವನ ಮೂಳೆಗಳನ್ನು ಮುರಿದು ಮುದ್ದೆಮಾಡಿ

ಮುಕ್ಕಿಬಿಟ್ಟಿತು. ಅದನ್ನು ನೋಡಿ ನಮಗೆ ದಿಗಿಲು ಉಂಟಾಯಿತು. ನಾವು ಓಡಿಹೋಗಿ ಒಂದು ಎತ್ತರವಾದ ಮರವನ್ನು ಹತ್ತಿಕೊಂಡು ಅಲ್ಲಿಯೇ ರಾತ್ರಿಯನ್ನು ಕಳೆದೆವು. ಬೆಳಗ್ಗೆ ಅಲ್ಲಲ್ಲಿ ಸುತ್ತಾಡಿ ಅಲ್ಲಿದ್ದ ಹಣ್ಣುಹಂಪಲು ತಿಂದು ಹಸಿವೆಯನ್ನು ತೀರಿಸಿಕೊಂಡೆವು. ಕೂಡನೆಯು ಸಾಯಂಕಾಲ ಹಟಾತ್ತಾಗಿ ಆ ಹಾವು ನಮ್ಮ ಬೆನ್ನ ಹತ್ತಿ ನಾವು ಏರಿದ್ದ ಮರದುದ್ದಕ್ಕೂ ನಿಗುರಿ, ಉಳಿದ ಇನ್ನೊಬ್ಬನನ್ನೂ ಎಳೆದು ಕೆಡವಿ, ಅದೇ ರೀತಿ ತಿಂದುಬಿಟ್ಟು ಹೊರಟುಹೋಯಿತು. ಇನ್ನೊಂದು ದಿನ ಇಲ್ಲಿ ಇದ್ದರೆ ಈ ಹಾವಿನ ಹೊಟ್ಟೆ ನನಗೂ ಸುಡುಗಾಡು ಆದೀತೆಂದು ಹೆದರಿದೆನು. ನಾನು ಕುಳಿತುಕೊಳ್ಳುವ ಮರದ ಕೊಂಬೆಗಳ ಸುತ್ತಲೂ ಮುಳ್ಳುಗಿಡಗಳನ್ನು ಭದ್ರವಾಗಿ ಕಟ್ಟಿ, ಒಂದು ಕೋಟೆಯಂತೆ ಮಾಡಿ, ಇನ್ನೊಂದು ಇರುಳು ಅಲ್ಲೇ ಕಳೆದೆನು. ಆ ರಾತ್ರಿ ಆ ಹಾವು ನನ್ನನ್ನು ಹಿಡಿಯಲಿಕ್ಕೆ ಬಂದು, ಮುಳ್ಳುಬೇಲಿಯೊಳಗೆ ತನ್ನ ಬಾಯಿಯನ್ನು ಚಾಚಲಾರದೆ ಬುಸುಗುಟ್ಟುತ್ತಾ ಇತ್ತು. ಕಣ್ಣಿಗೆ ನಿದ್ದೆ ಹತ್ತಿದರೆ ನಾನು ಕೆಳಕ್ಕೆ ಬಿದ್ದು ಹಾವಿನ ಬಾಯಿಗೆ ತುತ್ತಾದೇನೆಂದು ಹೆದರಿ, ಇಡೀ ರಾತ್ರಿ ಜಾಗರದಿಂದ ಇದ್ದೆನು. ಬೆಳಗ್ಗೆ ಆ ಸರ್ಪವು ಎಲ್ಲಿಗೋ ಮಾಯವಾಯಿತು.

ಕಡೆಗೆ ನನಗೆ ಜೀವದಾಸೆ ಉಳಿಯಲಿಲ್ಲ. ಈ ಪ್ರದೇಶದಲ್ಲಿ ಒಂಟಿಯಾಗಿ ಒಂದಲ್ಲ ಒಂದು ಪ್ರಾಣಿಗೆ ಸಿಕ್ಕಿ ಸಾಯುವುದೇ ನಿಶ್ಚಯವೆಂದು ಯೋಚನೆ ಮಾಡುತ್ತಾ ಬುದ್ಧಿಗೆಟ್ಟವನಂತೆ ದಡದ ಮೇಲೆ ಇರುವ ಬಂಡೆಯನ್ನು ಏರಿ ಕುಳಿತಿದ್ದೆನು. ಆಗ ದೈವವಶಾತ್ ದೂರದಲ್ಲಿ ಹೋಗುವ ಒಂದು ಹಡಗಿನ ಕೂವೆಮರದ ತುದಿಯು ಕಣ್ಣಿಗೆ ಬಿತ್ತು. ಬರಬರುತ್ತಾ ಹಡಗು ಸಹ ಕಾಣಿಸಿತು. ಆಗ ನಾನು ನನ್ನ ರುಮಾಲನ್ನು ಬಿಚ್ಚಿ ಅದರ ತುದಿಯನ್ನು ಗಾಳಿಗೆ ತೇಲಬಿಟ್ಟು ನಿಶಾನಿ ಹಚ್ಚಿದೆನು. ಅದನ್ನು ನೋಡಿ ಹಡಗಿನಲ್ಲಿದ್ದವರು ಹಡಗು ನಿಲ್ಲಿಸಿ, ಒಂದು ದೋಣಿಯನ್ನು ಕಳುಹಿಸಿದರು. ದೋಣಿಯು ಸಮೀಪಿಸಿದೊಡನೆ ನಾನು ದೋಣಿ ಹತ್ತಿ ಹಡಗನ್ನು ಸೇರಿದೆನು. ಹಡಗಿನಲ್ಲಿದ್ದವರೆಲ್ಲರು ನನ್ನನ್ನು ಮುತ್ತಿಕೊಂಡು ನನ್ನ ವೃತ್ತಾಂತವನ್ನು ಕೇಳಿದರು. ಈ ದ್ವೀಪವು ನರಭಕ್ಷಕರ ಮತ್ತು ಘಟಸರ್ಪಗಳ ಪ್ರದೇಶವೆಂದು ಒಬ್ಬ ಮುದಿ ನಾವಿಕನು ಹೇಳಿದನು.

ಆ ಮೇಲೆ ಅವರು ನನಗೆ ಬೇರೆ ಉಡುಪನ್ನು ಕೊಟ್ಟು ತಿಂಡಿಯನ್ನು ಒದಗಿಸಿದರು. ಅನಂತರ ನಾವು ಹಡಗಿನಲ್ಲಿ ಪ್ರಯಾಣಮಾಡುತ್ತಾ ಅಲ್ಲಲ್ಲಿ ಬಗೆಬಗೆಯ ವೈಚಿತ್ರ್ಯಗಳನ್ನು ನೋಡಿದೆವು. ಒಂದು ಕಡೆಯಲ್ಲಿ ಒಂದು ಆಮೆಯು ಸುಮಾರು ಇಪ್ಪತ್ತು ಮೊಳ ಉದ್ದವಾಗಿತ್ತು. ಇನ್ನೊಂದು ಕಡೆಯಲ್ಲಿ ಹಸುವಿನ ಮುಸುಡುಳ್ಳ ಒಂದು ಜಾತಿಯ ಮೀನು ಇತ್ತು. ಅದು ಮರಿಗಳಿಗೆ ಮೊಲೆಯುಣ್ಣಿಸುತಿತ್ತು. ಅಲ್ಲಿಯ ಜನರು ಆ ಮೀನಿನ ಚರ್ಮದಿಂದ ಗುರಾಣಿಗಳನ್ನು ಮಾಡುತಿದ್ದರು. ಇಂಥ ವಿಶೇಷಗಳನ್ನು ನೋಡುತ್ತಾ ನಾವು ಬಾಲ್ಸೋರಕ್ಕೆ ಸೇರಿದೆವು.

ನಾಲ್ಕನೆಯ ಪ್ರಯಾಣ

ಹಿಂದಿನ ಪ್ರಯಾಣಗಳ ಸಂಕಷ್ಟಗಳು ಬಹುಕಾಲ ನನ್ನ ಮನಸ್ಸಿನಲ್ಲಿ ಉಳಿಯಲಿಲ್ಲ. ಬೇರೆ ಬೇರೆ ದೇಶಗಳನ್ನು ಸಂಚರಿಸಿ, ಅಲ್ಲಿಯ ವೈಚಿತ್ರ್ಯಗಳನ್ನು ಕಾಣಬೇಕೆಂಬ ಲವಲವಿಕೆಯು ನನ್ನನ್ನು ಕಾಡುತ್ತಲೇ ಇತ್ತು. ಈ ಸಲ ನಾನು ಬಾಗ್ದಾದದಿಂದ ಪರ್ಷಿಯದ ಕಡೆಗೆ ಪ್ರಯಾಣಮಾಡಿದೆನು. ಅಲ್ಲಿ ಒಂದು ಬಂದರುಸ್ಥಳಕ್ಕೆ ಬರಲು ಸರಕನ್ನು ಮಾರಿ ಸಾಹುಕಾರರೊಡನೆ ಹಡಗಿನಲ್ಲಿ ಅಲ್ಲಿಯ ಸರಕನ್ನು ತುಂಬಿಸಿ ಹೊರಟೆನು. ಸ್ವಲ್ಪ ದಿನಗಳಲ್ಲಿಯೇ ಒಂದು ಪ್ರಚಂಡವಾದ ಬಿರುಗಾಳಿ ಎದ್ದಿತು. ಪಟಗಳು ಗಾಳಿಯನ್ನು ತಡೆಯಲಾರದೆ ಚೂರುಚೂರಾಗಿ ಹರಿದು ಹೋದುವು; ಕೂವೆಮರಗಳು ತುಮುರುತುಮುರಾಗಿ ಮುರಿದುಬಿದ್ದುವು. ಹಡಗಿನ ಯಜಮಾನನು ಎಷ್ಟು ಪ್ರಯತ್ನಪಟ್ಟರೂ ಹಡಗನ್ನು ಆಟೋಪಿಸಲಿಕ್ಕೆ ಸಾಧ್ಯವಾಗಲಿಲ್ಲ. ಹಡಗು ಕಡಲಿನಲ್ಲಿರುವ ಬಂಡೆಗೆ ತಗಲಿ ಒಡೆದು ಹೋಯಿತು. ಹಲವರು ಕಡಲಲ್ಲಿ ಬಿದ್ದು ಮುಳುಗಿಹೋದರು; ಸರಕೆಲ್ಲ ಕಡಲಿನ ಪಾಲಾಯಿತು.

ನಾನೂ ಇನ್ನು ಕೆಲವು ವರ್ತಕರೂ ಹಡಗಿನ ಒಂದು ಹಲಗೆಯನ್ನು ಹಿಡಿದುಕೊಂಡು ಕಡಲಿನಲ್ಲಿ ತೇಲುತ್ತಾ ಕಡೆಗೆ ಒಂದು ದ್ವೀಪದ ತೀರಕ್ಕೆ ಬಂದು ಬಿದ್ದೆವು. ಆ ದ್ವೀಪದಲ್ಲಿ ಅಡ್ಡಾಡುತ್ತಾ ಹಣ್ಣುಹಂಪಲುಗಳನ್ನು ತಿಂದು ನೀರನ್ನು ಕುಡಿದು ವಿಶ್ರಮಿಸಿದೆವು. ಆ ಮೇಲೆ ದ್ವೀಪದ ಒಳಭಾಗಕ್ಕೆ ಹೋಗಲು ಮುಂದರಿಸಿದೆವು. ದೂರದಲ್ಲಿ ಕೆಲವು ಮನೆಗಳು

ಕಂಡುಬಂದುವು. ಅಲ್ಲಿ ಇರುವವರು ಯಾರೆಂದು ಗೊತ್ತುಹಚ್ಚುವುದಕ್ಕಾಗಿ ನಾವು ಹೋದೆವು. ಆಗ ಕರಾಳ ಮುಖವೂ ಭಯಂಕರವಾದ ಆಕಾರವೂ ಉಳ್ಳ ಕೆಲ ಮಂದಿ ಜನರು ಓಡಿಬಂದು ನಮ್ಮನ್ನು ಮುತ್ತಿಕೊಂಡು ನಮ್ಮನ್ನು ತಮ್ಮತಮ್ಮೊಳಗೆ ಹಂಚಿಕೊಂಡು ತಮ್ಮ ಮನೆಗಳಿಗೆ ವೈದರು. ನಾವು ನಾಲ್ಕೈದು ಜನರು ಮಾತ್ರ ಒಂದು ಮನೆಯನ್ನು ಸೇರಿದೆವು. ಆ ಮನೆಯವರು ನಮಗೆ ಒಂದು ಬೇರನ್ನು ಕೊಟ್ಟು ಅದನ್ನು ತಿನ್ನಿರೆಂದು ಸನ್ನೆ ಮಾಡಿದರು. ಅವರು ಮಾತ್ರ ಅದನ್ನು ತಿನ್ನದೆ ನಾವು ತಿನ್ನುವಂತೆ ಬಲತ್ಕರಿಸುವುದನ್ನು ಕಂಡು, ನಾನು ಆ ಬೇರನ್ನು ಬಾಯಿಗೆ ಹಾಕದೆ ಸುಮ್ಮನಿದ್ದೆನು. ಆದರೆ ನನ್ನ ಜತೆಯವರು ಮಾತ್ರ ಹಿಂದುಮುಂದು ನೋಡದೆ ಬೇರನ್ನು ಜಗಿದು ಬಿಟ್ಟರು. ಕೂಡಲೇ ಅವರಿಗೆ ಮತ್ತು ಹಿಡಿದಂತಾಗಿ ತಲೆ ಕೆಟ್ಟು ಹೋಯಿತು. ಬುದ್ಧಿ ಮಂಕಾಯಿತು. ಅವರು ಏನೇನೋ ಮಾತಾಡತೊಡಗಿದರು. ಆ ಮೇಲೆ ಆ ಕ್ರೂರ ಜನರು ನಮಗೆ ಕೊಬರಿಎಣ್ಣೆ ಬೆರಸಿದ ಅನ್ನವನ್ನು ಊಟಮಾಡಲಿಕ್ಕೆ ಕೊಟ್ಟರು. ಬುದ್ಧಿಕೆಟ್ಟ ನನ್ನ ಗೆಳೆಯರು ಆ ಅನ್ನವನ್ನು ಮಿತಿಮೀರಿ ಮುಕ್ಕುತಿದ್ದರು. ನಾನು ಶಂಕಿಸಿ ಶಂಕಿಸಿ ಬಹಳ ಮಿತವಾಗಿ ತಿನ್ನುತಿದ್ದೆನು. ದಿನಹೋಗುತ್ತಾ ಹೋಗುತ್ತಾ ನನ್ನ ಗೆಳೆಯರು ಪುಷ್ಟಿಯಾಗುತ್ತಾ ಬಂದರು. ನಾನು ಮಾತ್ರ ಪ್ರಾಣಭಯದಿಂದ ಕರಗಿ ಬಡವಾಗುತ್ತಾ ಬಂದೆನು. ನನ್ನ ಗೆಳೆಯರು ತಮಗೆ ಮುಂದೆ ಬರತಕ್ಕ ಗತಿಯನ್ನು ಎಣಿಸಬಾರದೆಂದೇ ಆ ಕ್ರೂರ ಜನರು ಈ ಬೇರನ್ನು ತಿನ್ನಿಸಿದ ಹಾಗೆ ನನಗೆ ತೋರಿತು. ಕಡೆಗೆ ಆ ಕಾಡು ಜನರು ಚೆನ್ನಾಗಿ ಕೊಬ್ಬಿದ ಒಬ್ಬೊಬ್ಬರನ್ನೇ ಕೊಂದು ತಿನ್ನ ತೊಡಗಿದರು. ಇದರಿಂದ ಅವರು ನರಭಕ್ಷಕರೆಂಬುದು ನಮಗೆ ಗೊತ್ತಾಯಿತು.

ನಾನು ಮೈಯಲ್ಲಿ ಬಡಕಲಾಗುತ್ತಾ ಬಂದುದರಿಂದ ಆ ನರಭಕ್ಷಕರು ನನ್ನನ್ನು ತಿನ್ನದೆ ಬಿಟ್ಟಿದ್ದರು. ಒಂದು ದಿನ ಈ ಜನರು ಬೇಟೆಗಾಗಿ ದೂರ ಹೋಗಿದ್ದ ವೇಳೆಯಲ್ಲಿ ನಾನು ಧೈರ್ಯದಿಂದ ಹೊರಕ್ಕೆ ಮನೆ ಬಿಟ್ಟು ಹೊರಟೆನು. ಮನೆಯ ಮುದುಕನೊಬ್ಬನು ನನಗೆ ಹಿಂತಿರುಗಿ ಬರಬೇಕಾಗಿ ಕೈಸನ್ನೆ ಮಾಡಿದನು. ನಾನು ಅದನ್ನು ನೋಡಲಿಲ್ಲವೆಂಬಂತೆ ನಟಿಸಿ ಮುಂದರಿಸಿ ಸಮುದ್ರದ ದಡವನ್ನು ಸೇರಿದೆನು. ಅಲ್ಲಿ

ಕೆಲವು ಬಿಳಿಯ ಜನರನ್ನು ಕಂಡೆನು. ಅವರು ಅರಬಿಭಾಷೆಯನ್ನು ಆಡುತಿದ್ದರು. ಅವರು ಅಲ್ಲಿ ಮೆಣಸು ಕೊಯಿದು ಚೀಲಗಳಲ್ಲಿ ತುಂಬಿಸುತಿದ್ದರು. ನಾನು ಅವರನ್ನು ನೋಡಿ, ಅರಬಿ ಭಾಷೆಯಿಂದ ನನ್ನ ಸಮಾಚಾರವನ್ನೆಲ್ಲ ಹೇಳಿದೆನು. ಅವರು ನನ್ನ ಮೇಲೆ ಕನಿಕರಪಟ್ಟು, ನನ್ನನ್ನು ಅವರೊಂದಿಗೆ ಹಡಗಿನಲ್ಲಿ ಅವರ ದ್ವೀಪಕ್ಕೆ ಕರೆದುಕೊಂಡು ಹೋದರು. ಅಲ್ಲಿ ಇಳಿದ ಮೇಲೆ ಅವರು ನನ್ನನ್ನು ಅವರ ರಾಜನ ಬಳಿಗೆ ಕರೆದುಕೊಂಡು ಹೋದರು. ಆ ಅರಸನು ನನ್ನ ವೃತ್ತಾಂತವನ್ನು ಕೇಳಿ ತುಂಬಾ ಆಶ್ಚರ್ಯಪಟ್ಟು ನನ್ನನ್ನು ಸತ್ಕರಿಸಿದನು. ನನ್ನ ಮೇಲೆ ಅಲ್ಲಿಯ ರಾಜನು ವಿಶ್ವಾಸವಿಟ್ಟು ಅಲ್ಲಿಯೇ ನಿಲ್ಲಿಸಿಕೊಂಡಿದ್ದರಿಂದ ನಾನು ಕೆಲವು ಕಾಲ ನನ್ನ ಕಷ್ಟಗಳನ್ನು ಮರೆತು ಸುಖವಾಗಿದ್ದೆನು.

ಒಂದು ದಿನ ಅಲ್ಲಿಯ ರಾಜನೂ ಪುರಜನರೂ ಕುದುರೆ ಸವಾರಿಯಾಗಿ ಅಲ್ಲಿ ಸಮೀಪವಿರುವ ಒಂದು ಸ್ಥಳಕ್ಕೆ ಹೊರಟರು. ಅವರು ಕುದುರೆಗಳಿಗೆ ಕಡಿವಾಣವನ್ನು ಬಿಗಿಯದೆ ಜೀನಿಲ್ಲದೆ ಸವಾರಿ ಮಾಡುವುದನ್ನು ನಾನು ಕಂಡು, ಅವರಿಗೆ ಕಡಿವಾಣಗಳ ಪ್ರಯೋಗವೇ ಗೊತ್ತಿಲ್ಲವೆಂದು ತಿಳಿದೆನು. ಅದಕ್ಕಾಗಿ ನಾನು ಒಬ್ಬ ಕಮ್ಮಾರನನ್ನು ಕರೆಯಿಸಿ, ಅವನಿಂದ ಕಡಿವಾಣವನ್ನೂ ಚರ್ಮದ ಒಂದು ಹಲ್ಲಣವನ್ನೂ ಮಾಡಿಸಿ, ಅವೆರಡನ್ನೂ ಆ ಅರಸನಿಗೆ ಕಾಣಿಕೆಯಾಗಿ ಕೊಟ್ಟೆನು. ಆಗ ಆ ಅರಸನು ತುಂಬಾ ಆಶ್ಚರ್ಯಪಟ್ಟು ನನ್ನನ್ನು ಉಡುಗೊರೆಗಳಿಂದ ಸನ್ಮಾನಿಸಿದನು. ಕಡೆಗೆ ಅಲ್ಲಿಯ ಜನರೆಲ್ಲರೂ ಕಡಿವಾಣ ಜೀನುಗಳನ್ನು ನನ್ನಿಂದ ಒದಗಿಸಿಕೊಂಡರು. ಕೆಲವು ದಿನಗಳಲ್ಲಿ ನಾನು ಧನಾಢ್ಯನಾದೆನು.

ಒಂದು ದಿನ ರಾಜನು ನನ್ನನ್ನು ಕರೆಯಿಸಿ:—“ಅಯ್ಯಾ! ಸಿಂದಬಾದನೇ, ನನಗೆ ನಿನ್ನ ಮೇಲೆ ತುಂಬಾ ಪ್ರೀತಿಯಿದೆ. ನನ್ನ ಮಾತನ್ನು ನೀನು ನಡಿಸಬೇಕು. ಇಲ್ಲವೆನ್ನಬಾರದು” ಎಂದನು. ಅದಕ್ಕೆ ನಾನು “ಮಹಾಸ್ವಾಮಿ! ತಮ್ಮ ಆಜ್ಞೆಯನ್ನು ನಾನು ಇದುವರೆಗೆ ಮೀರಿ ನಡೆದವನಲ್ಲ. ಈಗ ಮಾಡತಕ್ಕ ಮಹತ್ವದ ಕೆಲಸವೇನಿರಬಹುದು?” ಎಂದೆನು. ಆಗ ಅರಸನು “ಅಯ್ಯಾ! ನಮ್ಮ ಊರಮಂತ್ರಿಗೆ ಒಬ್ಬಳೇ ಮಗಳು; ಅವಳನ್ನು ನೀನು ಮದುವೆ ಮಾಡಿಕೊಂಡು ಇಲ್ಲಿಯೇ ಇರಬೇಕು. ಇನ್ನು ನಿನ್ನ ದೇಶಕ್ಕೆ ಹಿಂತಿರುಗಿ ಹೋಗುವ ಆಸೆಯನ್ನು

ತೊರೆದು ಬಿಡು" ಎಂದು ನನ್ನನ್ನು ಬಲವಂತಪಡಿಸಿದನು. ನಾನು ಆ ಮಾತನ್ನು ಮೀರಲಾಗದೆ ಮಂತ್ರಿಯ ಮಗಳನ್ನು ಮದುವೆಯಾಗಿ ಅಲ್ಲಿ ಕೆಲವು ಕಾಲವಿದ್ದೆನು.

ಒಂದು ದಿನ ತನ್ನ ಅತ್ಯಂತ ಸ್ನೇಹಿತನಾಗಿದ್ದ ಒಬ್ಬ ಸಾಹುಕಾರನ ಹೆಂಡತಿಯು ಕಾಲವಾದಳು. ಆ ಸ್ನೇಹಿತನ ದುಃಖವನ್ನು ಸಮಾಧಾನ ಪಡಿಸಬೇಕೆಂದು ನಾನು ಅವನ ಮನೆಗೆ ಹೋದೆನು. ಅಲ್ಲಿ ಒಂದು ಭಯಂಕರವಾದ ಸಂಗತಿಯು ನನಗೆ ಗೊತ್ತಾಯಿತು. ಗಂಡ ಸತ್ತರೆ ಅವನೊಂದಿಗೆ ಹೆಂಡತಿಯನ್ನೂ, ಹೆಂಡತಿ ಸತ್ತರೆ ಆವಳೊಂದಿಗೆ ಗಂಡನನ್ನೂ ಹೂಳಿಡುವುದು ಆ ದೇಶದ ಪದ್ಧತಿಯೆಂದು ಆ ಗೆಳೆಯನು ನನಗೆ ಹೇಳಿದನು. ಆಗ ನನ್ನ ತಲೆಗೆ ಸಿಡಿಲು ಬಡೆದಂತಾಯಿತು.

ನನ್ನ ಗೆಳೆಯನನ್ನು ಹೆಂಡತಿಯ ಶವದೊಡನೆ ಬಹಳ ಸಮಾರಂಭ ದಿಂದ ಆ ಊರಿನ ಹೊರಗೆ ಬೆಟ್ಟದ ಬದಿಯಲ್ಲಿರುವ ಒಂದು ಗವಿಗೆ ಕೊಂಡುಹೋದರು. ಅಲ್ಲಿ ಆಳವಾದ ಗುಳಿ ತೋಡಿ, ಆ ಶವದ ಪೆಟ್ಟಿಗೆಯನ್ನೂ ಅದರೊಂದಿಗೆ ನನ್ನ ಗೆಳೆಯನನ್ನೂ ಇಳಿಸಿದರು. ಅವನಿಗೋಸ್ಕರ ಒಂದು ಬಿಂದಿಗೆ ನೀರನ್ನೂ ಏಳು ರೊಟ್ಟಿಗಳನ್ನೂ ಆ ಗುಳಿಯಲ್ಲಿ ಇಳಿಸಿಬಿಟ್ಟು ಜನರು ಹಿಂತೆರಳಿದರು. ನಾನೂ ಅವರೊಂದಿಗೆ ಹಿಂತಿರುಗಿ ಬಂದೆನು. ಆ ರಾತ್ರಿ ನನಗೆ ನಿದ್ದೆಯೇ ಇರಲಿಲ್ಲ. ಈ ಘೋರ ಪದ್ಧತಿಯು ನನ್ನ ಪಾಲಿಗೂ ಬಂದರೆ ಏನು ಮಾಡೋಣ ಎಂದು ನನಗೆ ಚಿಂತೆ ಹತ್ತಿತು.

ಮರುದಿನ ಅಲ್ಲಿಯ ರಾಜನನ್ನು ಭೇಟಿಮಾಡಿ, "ಈ ಭಯಂಕರ ಕ್ರಮವು ಅನ್ಯದೇಶಿಯನಾದ ನನಗೂ ಸಂಭವಿಸಬಹುದೇ!" ಎಂದು ಕೇಳಿದೆನು. ಅದಕ್ಕೆ ರಾಜನು "ಅಯ್ಯಾ! ಈ ಕ್ರಮವು ಬಹು ಪುರಾತನ ಕಾಲದಿಂದಲೂ ನಮ್ಮಲ್ಲಿ ನಡೆದು ಬಂದಿದೆ. ನನ್ನ ರಾಣಿಯು ಮಡಿದರೆ ನನಗೂ ಅದೇ ಗತಿಯಾಗುವುದು; ಅದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಲ್ಲ" ಎಂದನು. ಅದನ್ನು ಕೇಳಿ ನನ್ನ ಗಾಬರಿಯೂ ವ್ಯಸನವೂ ಹೆಚ್ಚುತ್ತಾ ಬಂದುವು.

ನನ್ನ ದುರದೃಷ್ಟದಿಂದ ಕೆಲವು ದಿನಗಳಲ್ಲಿ ನನ್ನ ಹೆಂಡತಿಯು ರೋಗಹಿಡಿದು ಸತ್ತುಹೋದಳು. ನನ್ನ ಹೆಂಡತಿಯ ಶವದೊಂದಿಗೆ

ನನ್ನನ್ನೂ ಆ ಬೆಟ್ಟದ ಗುಳಿಯ ಬಳಿಗೆ ಕರಕೊಂಡು ಹೋದರು. ಅಲ್ಲಿ ನನ್ನನ್ನೂ ಆ ಆಳವಾದ ಗುಳಿಯಲ್ಲಿ ಇಳಿಸಿದಾಗ ಅಲ್ಲಿ ಎಲ್ಲಿಯೋ ಒಂದಿಷ್ಟು ಬೆಳಕು ಬೀಳುತಿತ್ತು. ಗುಳಿಯಲ್ಲಿ ಹೆಣಗಳ ಎಲುಬು ರಾಶಿಯ ದುರ್ಗಂಧದಿಂದ ಸ್ವಲ್ಪ ಸಮಯದ ವರೆಗೆ ನನಗೆ ಮೂಗು ಬಿಡುವುದಕ್ಕೆ ಆಗಲಿಲ್ಲ. ನಾನು ಅಲ್ಲಿ ಬಿದ್ದುಕೊಂಡು ಹೊರಳಾಡಿ ಹೊರಳಾಡಿ ಅತ್ತೆನು; ಅತ್ತತ್ತು ಹೊರಳಾಡಿದೆನು. ಆದರೆ ಏನು ಮಾಡಲಿ? ಜೀವಂತನಾಗಿ ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಉಪಾಯ ತೋರಲಿಲ್ಲ. ಆದರೂ ಮರಣ ಬರುವ ವರೆಗೆ ಜೀವಂತನಾಗಿರಬೇಕೆಂಬ ಇಚ್ಛೆಯು ಹೋಗುವುದಿಲ್ಲ. ಹೀಗೆ ಇತ್ತ ಸಾಯದೆ, ಅತ್ತ ಬದುಕದೆ, ಹಲವು ದಿನಗಳ ವರೆಗೆ ಆ ಗುಳಿಯಲ್ಲಿ ಹೆಣಗಳೊಂದಿಗೆ ಜತೆಯಿಟ್ಟವರನ್ನು ಕೊಂದು, ಅವರಿಗಾಗಿ ಕೊಡುವ ಆಹಾರವನ್ನು ಅಪಹರಿಸಿ ಬದುಕಿದೆನು.

ಹೀಗಿರುತ್ತಾ ಒಂದು ದಿನ ನಾನು ಆ ಗವಿಯಲ್ಲಿ ಆಹಾರವನ್ನು ಹುಡುಕುತ್ತಾ ಹೋಗುವಾಗ ಯಾವುದೋ ಒಂದು ಕಂಡಿಯಿಂದ ಬೆಳಕು ಬಂದಂತೆ ಕಂಡು ಬಂತು. ಒಬ್ಬನು ನುಸುಳಿಕೊಂಡು ಹೋಗುವಷ್ಟು ದೊಡ್ಡ ತೂತು ಗವಿಯು ಆ ಬಂಡೆಯಲ್ಲಿ ಇತ್ತು. ಆ ತೂತಿನ ಹತ್ತಿರ ಬಂದಾಗ ಸಮುದ್ರದ ತೆರೆಗಳು ದಡಕ್ಕೆ ಬಡೆಯುವ ಶಬ್ದವೂ ಕೇಳಿಸುತಿತ್ತು. ನಾನು ಆಯಾಸಪಟ್ಟವನಾಗಿದ್ದುದರಿಂದ ಆ ಕಂಡಿಯ ಪಕ್ಕದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ಕಂಡಿಯನ್ನೇ ನೋಡುತ್ತಾ ನೋಡುತ್ತಾ ಫಕ್ಕನೆ ಹಾರಿ ಆ ಕಂಡಿಯಿಂದ ಮೆಲ್ಲಗೆ ಪಾರಾದೆನು. ಅಲ್ಲಿ ವಿಶಾಲವಾದ ಸಮುದ್ರವು ಕಾಣಿಸುತಿತ್ತು. ನಾನು ಬಂಡೆಯ ಮಗ್ಗುಲಿನಿಂದ ಕಡಲಿನ ದಡಕ್ಕೆ ಇಳಿದೆನು. ಒಂದು ಹಡಗು ತುಫಾನನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅಲ್ಲಿ ಲಂಗರುಹಾಕಿತ್ತು. ಹಡಗಿನವರು ಕಂಡು ನನ್ನನ್ನು ಹಡಗಕ್ಕೇರಿಸಿದರು. ಅವರಿಗೆ ನನ್ನ ಕಥೆಯಿಂದ ಉಂಟಾದ ಆಶ್ಚರ್ಯವು ಅಷ್ಟಿಷ್ಟಲ್ಲ. ಆ ಮೇಲೆ ನಾವು ಹೊರಟು ಸಿಂಹಳ ಮುಂತಾದ ದ್ವೀಪಗಳನ್ನು ದಾಟಿ, ಬಾಲ್ಸೋರಕ್ಕೆ ಬಂದು ಮುಟ್ಟಿದೆವು. ಅಲ್ಲಿಂದ ನಾನು ಊರುಮನೆಯನ್ನು ಸೇರಿದೆನು.

ಐದನೆಯ ಪ್ರಯಾಣ

ನಾಲ್ಕನೆಯ ಪ್ರಯಾಣದಲ್ಲಿ ನನಗೆ ಒದಗಿದ ಸಂಕಷ್ಟಗಳು ನನಗೆ ಆಗಾಗ ಸ್ಮರಣೆಗೆ ಬರುತಿದ್ದರೂ ನನ್ನ ಕಷ್ಟಗಳ ಮೂಟೆಯು ತೀರಲಿಲ್ಲ. ಹೀಗಾಗಿ ದ್ವೀಪಾಂತರಕ್ಕೆ ಹೊರಡಲಿರುವ ಕೆಲವು ವರ್ತಕರೊಕನೆ ನಾನೂ ಒಂದು ಹಡಗನ್ನು ಬಾಡಿಗೆಗೆ ಮಾಡಿಕೊಂಡು ಪುನಃ ಹೊರಟೆನು.

ಕೆಲವು ದಿನ ಪ್ರಯಾಣ ಮಾಡಿದ ತರುವಾಯ ಜನಸಂಚಾರವಿಲ್ಲದ ಒಂದು ದ್ವೀಪವನ್ನು ಕಂಡೆವು. ಅದರ ಬಳಿಯಲ್ಲಿ ಹಡಗನ್ನು ನಿಲ್ಲಿಸಿ, ನಾವು ಕೆಲವರು ಆ ದ್ವೀಪಕ್ಕೆ ಇಳಿದು ಅಲ್ಲಲ್ಲಿ ಸಂಚರಿಸುತ್ತಿದ್ದಾಗ, ಅದ್ಭುತವಾದ ಒಂದು ತತ್ತಿಯನ್ನು ಕಂಡೆವು. ಮೊಟ್ಟೆಯೊಡೆದು ಮರಿಯು ಹೊರಗೆ ಬರುತ್ತಲಿತ್ತು. ಅದು ರೊಕ್ ಎಂಬ ಪಕ್ಷಿಯ ಮೊಟ್ಟೆಯೆಂದು ನನಗೆ ಗೊತ್ತಾಯಿತು. ಈ ಪಕ್ಷಿಯ ಪ್ರಭಾವವನ್ನು ನಾನು ಮೊದಲೇ ಬಲ್ಲವನಾದ್ದರಿಂದ, ಅದರ ಗೊಜಿಗೆ ಹೋಗಬಾರದೆಂದು ನನ್ನ ಜತೆಯುವರನ್ನು ಎಚ್ಚರಿಸಿದೆನು. ತರುಣರೂ ಪುಂಡರೂ ಆದ ಅವರು ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಕೈಕೊಡಲಿಗಳಿಂದ ಆ ಮೊಟ್ಟೆಯನ್ನು ಒಡೆದು, ಹೊರಗೆ ಬರುತ್ತಲಿರುವ ಮರಿಯನ್ನು ತುಂಡರಿಸಿದರು. ಅಷ್ಟರಲ್ಲಿಯೇ ಆಕಾಶದಲ್ಲಿ ಭಯಂಕರವಾದ ಒಂದು ಬಿರುಗಾಳಿಯ ಶಬ್ದವೂ ನಾವು ನಿಂತ ಸ್ಥಳದ ಮೇಲೆ ಬಿಸಿಲನ್ನು ಅಡ್ಡಗಟ್ಟುವ ಒಂದು ಕರಿಯ ನೆರಳೂ ಉಂಟಾದುವು. ನಾನು ಮೇಲಕ್ಕೆ ನೋಡಿ ಆ ಪಕ್ಷಿಗಳು ಬಂದುವೆಂದು ಹಡಗಿನವರಿಗೆ ತಿಳಿಸಿದೆನು. "ನಾವು ಈಗಲೇ ಹಡಗು ಹತ್ತಿ ಪ್ರಯಾಣ ಮಾಡಬೇಕು, ಇಲ್ಲವಾದರೆ ನಮಗೆ ಖಂಡಿತವಾಗಿ ಪ್ರಾಣಾಪಾಯವಿದೆ" ಎಂದು ಅವರನ್ನು ಅವಸರ ಪಡಿಸಿದೆನು. ನಾವೆಲ್ಲರೂ ಓಡಿ ಹಡಗನ್ನು ಸೇರಿದೆವು. ತಾಂಡೇಲನು ಹಡಗಿನ ಹಾಯಿಯನ್ನು ಬಿಚ್ಚಿ ಒಡನೆಯೇ ಹಡಗನ್ನು ಸಮುದ್ರದ ಕಡೆಗೆ ಬಿಟ್ಟನು.

ಅಷ್ಟರೊಳಗೆ ಹಕ್ಕಿಗಳು ಆ ಮೊಟ್ಟೆಯನ್ನು ಕಂಡು, ದುಃಖದಿಂದ ಕೂಗುತ್ತಾ ಆಕಾಶಕ್ಕೆ ಮರಳಿ ಹಾರಿ ಎಲ್ಲಿಗೊ ಮಾಯವಾದುವು. ಸ್ವಲ್ಪ ಹೊತ್ತಿನ ಮೇಲೆ ಹತ್ತಾರು ದೊಡ್ಡ ದೊಡ್ಡ ಬಂಡೆಕಲ್ಲುಗಳು ಬಹಳ ಎತ್ತರದಿಂದ ನಮ್ಮ ಹಡಗಿನ ನಡುವಿಗೆ ಬಿದ್ದುವು. ನಾವು ತಲೆ ಎತ್ತಿ ನೋಡಲಾಗಿ, ಆ ಕೆಲಸವು ಹಾರಿಹೋದ ಹಕ್ಕಿಗಳ ಭಯಂಕರ ಕೃತ್ಯವೆಂದು

ತಿಳಿಯಿತು. ಒಂದೊಂದು ಕಲ್ಲು ಬೀಳುತಿದ್ದ ಹಾಗೆ ಹಡಗಿನ ಚುಕ್ಕಾಣಿದಾರನು ಅದರ ಪೆಟ್ಟನ್ನು ತಪ್ಪಿಸುವಂತೆ ಹಡಗನ್ನು ತಿರುಗಿಸುತಿದ್ದನು. ಅದೂ ಪ್ರಯೋಜನವಾಗಲಿಲ್ಲ. ಒಂದು ದೊಡ್ಡ ಕಲ್ಲು ಬಿದ್ದು ಹಡಗಿನ ನಡುವು ಮುರಿಯಿತು. ಕಡಲಿನ ನೀರು ಧಾರಾಳವಾಗಿ ಹಡಗಿನೊಳಗೆ ತುಂಬಿ, ಹಡಗು ಮುಳುಗತೊಡಗಿತು. ನಾವು ಕೆಲವರು ಹಡಗಿನ ಒಂದೊಂದು ಹಲಗೆಯನ್ನು ಹಿಡಿದು, ಸ್ವಲ್ಪ ಸಮಯದ ವರೆಗೆ ಈಸುತ್ತಾ ಇದ್ದೆವು. ಒಂದು ದೊಡ್ಡ ತೆರೆಯು ನಾನು ಹಿಡಿದ ಹಲಗೆಯೊಂದಿಗೆ ನನ್ನನ್ನು ಒಂದು ದಡಕ್ಕೆ ಅಪ್ಪಳಿಸಿಬಿಟ್ಟಿತು. ಆಗ ನಾನು ಸ್ವಲ್ಪ ಹೊತ್ತು ಮೂರ್ಛೆಯಾಗಿ ನೆಲಹಿಡಿದಿದ್ದು, ಕಡೆಗೆ ಚೇತರಿಸಿಕೊಂಡು ದಡದಿಂದ ಒಳ ಪ್ರದೇಶಕ್ಕೆ ಹೊರಟೆನು.

ಆ ಪ್ರದೇಶವು ನೋಡುವುದಕ್ಕೆ ಬಲು ರಮಣೀಯವಾಗಿತ್ತು. ಗೊಂಚಲಾಗಿ ತೂಗುವ ಹಣ್ಣುಗಳು, ಹಣ್ಣುಗಳ ಭಾರದಿಂದ ಬಗ್ಗಿದ ಅನೇಕಾನೇಕ ಮರಗಳು; ಮರಗಳ ಎಲೆಗಳಿಂದ ದಟ್ಟವಾಗಿದ್ದು ಕೆಳಗೆ ಬಿದ್ದಿರುವ ನೆರಳು—ಇದೆಲ್ಲಾ ರಮಣೀಯವಾಗಿತ್ತು. ನಾನು ಆ ನೆರಳಲ್ಲಿ ಮಲಗಿಕೊಂಡು ಕೊಂಚ ಹೊತ್ತು ವಿಶ್ರಮಿಸಿದೆನು. ಆ ಮೇಲೆ ಹಣ್ಣುಗಳನ್ನು ತಿಂದು ನಿರ್ಮಲವಾಗಿ ಹರಿಯುವ ಸಣ್ಣ ತೊರೆಯ ನೀರನ್ನು ಕುಡಿದು, ಜಾಗರೂಕತೆಯಿಂದ ಮುಂದೆ ಹೋಗುತ್ತಿರಲು, ಬಹಳ ಬಲಹೀನನಾಗಿದ್ದ ಒಬ್ಬ ಮುದುಕನು ಒಂದು ಬದಿಯಲ್ಲಿ ಬಿದ್ದಿರುವುದನ್ನು ಕಂಡೆನು. ಅವನನ್ನು ಕಂಡು ಕನಿಕರಪಟ್ಟು ನಾನು ಮಾತನಾಡಿಸಲು ಯತ್ನಿಸಿದೆನು. ಅವನು ನನಗೆ ಮರುತ್ತರ ಕೊಡದೆ ಕೈಸನ್ನೆ ಮಾಡಿ, ತನ್ನನ್ನು ಆ ತೊರೆಯಿಂದ ಆಚೆಯಿರುವ ಸ್ಥಳಕ್ಕೆ ಒಯ್ದುಬಿಡಬೇಕೆಂದು ಸೂಚಿಸಿದನು.

ನಾನು ಅವನನ್ನು ಬೆನ್ನ ಮೇಲೇರಿಸಿ, ಆ ತೊರೆಯನ್ನು ದಾಟಿ, ಆ ಮುದುಕನನ್ನು ಕೆಳಗಿಳಿಸುವುದಕ್ಕಾಗಿ ಬಗ್ಗಿದೆನು. ಆದರೆ ಆ ಪ್ರಾಣಿಯು ತನ್ನ ಕಾಲುಗಳಿಂದ ನನ್ನ ಕತ್ತನ್ನು ಇಕ್ಕುಳದಂತೆ ಅಮುಕಿ ಹಿಡಿದು, ನನಗೆ ಉಸಿರಾಡಲು ಬಿಡದೆ, ಹೆಗಲಿನ ಮೇಲೆ ಬಲವಾಗಿ ಕುಳಿತುಕೊಂಡಿತು. ನಾನು ಉಸಿರು ಕಟ್ಟಿಹೋಗಿ ನೆಲದ ಮೇಲೆ ಮೂರ್ಛೆಯಿಂದ ಬಿದ್ದ ಮೇಲೆ, ಆ ಪ್ರಾಣಿಯು ತನ್ನ ಕಾಲುಗಳನ್ನು ಕೊಂಚಸಡಿಲಿಸಿತೇ

ಹೊರತು, ನನ್ನ ಹೆಗಲನ್ನು ಬಿಟ್ಟು ಕೆಳಕ್ಕೆ ಇಳಿಯಲಿಲ್ಲ. ನಾನು ಎಚ್ಚತ್ತೆನೆಂದು ತಿಳಿದ ಮೇಲೆ ಅದು ಕಾಲಿನ ಹಿಮ್ಮಡಿಗಳಿಂದ ನನ್ನ ಎದೆಗೆ ಒದೆದು, ಕೈಗಳಿಂದ ನನ್ನ ಬೆನ್ನಿಗೆ ಚಪ್ಪರಿಸಿ, ನಾನು ಎದ್ದು ನಿಲ್ಲು ವಂತೆ ಮಾಡಿತು. ಆ ಮೇಲೆ ಆ ಹಣ್ಣುಗಳಿರುವ ಮರಗಳ ಬುಡಕ್ಕೆ ನಾನು ಹೋಗಬೇಕೆಂದು ಕೈಸನ್ನೆ ಮಾಡಿತು. ಅಲ್ಲಿ ಹೋದನಂತರ ಕೈ ತುಂಬಾ ಹಣ್ಣುಗಳನ್ನು ಆಯ್ದುಕೊಂಡು ತಿಂದು, ಹೊಟ್ಟೆ ತುಂಬಿಸಿ ಕೊಂಡಿತು. ಈ ಪ್ರಾಣಿಗೆ ನನ್ನ ಹೆಗಲಿನಿಂದ ಇಳಿಯುವ ಆಲೋಚನೆ ಇದ್ದಂತೆ ತೋರಲಿಲ್ಲ. ನಾನು ಸಾಯಂಕಾಲದ ವರೆಗೆ ದಣಿದು ಒಂದು ಮರದ ಬುಡದಲ್ಲಿ ಮಲಗಿದಾಗ, ಆ ಪ್ರಾಣಿಯು ನನ್ನ ಬಳಿಯಲ್ಲಿಯೇ ಮಲಗಿಕೊಂಡಿತು; ಆದರೆ ನನ್ನ ಕೊರಳಿಗೆ ಸುತ್ತಿದ ಕಾಲುಗಳ ಉರುಳು ಹಾಗೆಯೇ ಇತ್ತು. ಬೆಳಗಾಗುತ್ತಲೇ ಎದ್ದು, ನನ್ನ ಎದೆಗೆ ತನ್ನ ಕಾಲುಗಳಿಂದ ಒದೆದು, ನನ್ನನ್ನು ಎಚ್ಚರಿಸಿ, ಪುನಃ ಹಣ್ಣು ಮರಗಳ ಕಡೆಗೆ ಹೊಗುವಂತೆ ಸನ್ನೆಯಿಂದ ತಿಳಿಸಿತು. ಹೀಗೆ ಕೆಲವು ದಿನಗಳ ವರೆಗೆ ಈ ನಿರ್ದಯವಾದ ಪ್ರಾಣಿಯನ್ನು ಹೊತ್ತುಕೊಂಡು ಆ ನಿರ್ಜನ ಪ್ರದೇಶದಲ್ಲಿ ಸುತ್ತಾಡುವುದೇ ನನ್ನ ಪಾಲಿಗೆ ಬಂದಂತಾಯಿತು.

ಒಂದು ದಿನ ನಾನು ಈ ಪ್ರಾಣಿಯನ್ನು ಎಂದಿನಂತೆ ಹೊತ್ತುಕೊಂಡು ಹೋಗುತ್ತಿರುವಾಗ, ಒಂದು ಸೋರೆಬುರುಡೆ ನನಗೆ ದೊರೆಯಿತು. ನಾನು ಅಲ್ಲಿ ಹತ್ತಿರ ಬೆಳೆದಿದ್ದ ದ್ರಾಕ್ಷೆ ಹಣ್ಣುಗಳನ್ನು ಆ ಬುರುಡೆಯೊಳಕ್ಕೆ ಹಿಂಡಿ, ಕೆಲವು ದಿನಗಳ ತನಕ ರಸವನ್ನು ಬಿಸಿಲಿಗೆ ಒಡ್ಡಿ ಇಟ್ಟೆನು. ಆ ಮೇಲೆ ಅದರಲ್ಲಿ ಒಂದಿಷ್ಟನ್ನು ಕುಡಿದು ನೋಡಲು, ಒಂದು ಬಗೆಯ ಆನಂದವು ಉದ್ರೇಕವಾಯಿತು. ನಾನು ಹಾಡುತ್ತಾ ಕುಣಿಯುತ್ತಾ ಹೋಗುತ್ತಿರುವುದನ್ನು ಆ ಪ್ರಾಣಿಯು ನೋಡಿ, ಆ ರಸವನ್ನು ತಾನೂ ಕುಡಿಯಬೇಕೆಂದು ಬಯಸಿತು. ಅದನ್ನು ನಾನು ತಿಳಿದು ಅದಕ್ಕೆ ಆ ಸೋರೆಬುರುಡೆಯನ್ನು ಕೊಟ್ಟೆನು. ಅದು ಒಂದೇ ಗುಟುಕಿಗೆ ಆ ರಸವನ್ನೆಲ್ಲ ಕುಡಿದುಬಿಟ್ಟಿತು. ಆಗ ಅದು ಮತ್ತು ಹಿಡಿದು ಹುಚ್ಚನಂತೆ ಕುಣಿಯತೊಡಗಿತು. ಕಡೆಗೆ ಮೈಮರೆತು ನನ್ನ ಹೆಗಲಿನಿಂದ ಧೊಪ್ಪನೆ ಕೆಳಗೆ ಬಿದ್ದುಬಿಟ್ಟಿತು. ಆಗ ನಾನು ಇನ್ನು ಈ ಪ್ರಾಣಿಯಿಂದ ತಪ್ಪಿಸಿಕೊಳ್ಳುವುದೇ ಮೇಲೆಂದು ಭಾವಿಸಿ, ದೊಡ್ಡದಾದ ಗುಂಡುಕಲ್ಲನ್ನು

091460

ಎತ್ತಿ ತಂದು ಅದರ ತಲೆಯ ಮೇಲೆ ಎಸೆದೆನು. ಪ್ರಾಣಿಯು ಸತ್ತೇ ಹೋಯಿತು. ನಾನು ಬದುಕಿದೆನೆಂಬ ಸಂತೋಷದಿಂದ ತೀರದ ಕಡೆಗೆ ಓಡಿದೆನು. ಅಲ್ಲಿ ಸಮೀಪದಲ್ಲಿ ಒಂದು ಹಡಗು ತಂಗಿತ್ತು. ಇದಕ್ಕೆ ನನ್ನ ರುಮಾಲಿನಿಂದ ನಿಶಾನಿ ತೋರಿಸಲು, ಆ ಹಡಗಿನ ಕಲಾಸಿಗಳು ಒಂದು ದೋಣಿಯನ್ನು ಕಳುಹಿಸಿ ನನ್ನನ್ನು ಹಡಗಿಗೆ ವೈದರು. ನನ್ನ ಸಮಾಚಾರವನ್ನು ಕೇಳಿ, ಹಡಗಿನ ಜನರು “ಈ ಮುದುಕನ ಕೈಯಿಂದ ಇದು ವರೆಗೆ ತಪ್ಪಿಸಿಕೊಂಡವರು ಯಾರೂ ಇಲ್ಲ; ನೀನೇ ಪುಣ್ಯವಂತನು” ಎಂದು ಹೇಳಿ ನನ್ನನ್ನು ಆದರಿಸಿದರು.

ನಮ್ಮ ಹಡಗು ಒಂದು ದೊಡ್ಡ ನಗರದ ರೇವಿನಲ್ಲಿ ಕೆಲವು ದಿನ ನಿಲ್ಲಬೇಕಾಯಿತು. ಆಗ ನಮ್ಮ ಜತೆಯಲ್ಲಿದ್ದ ವರ್ತಕನೊಬ್ಬನು ಅಲ್ಲಿ ನನ್ನನ್ನು ಕೆಲಮಂದಿ ಜನರ ವಶಕ್ಕೆ ಒಪ್ಪಿಸಿ, “ಅವರು ಹೇಳಿದಂತೆ ನಡೆದು ಕೊಂಡು ಇರು. ಅವರನ್ನು ಬಿಟ್ಟಗಲಬೇಡ. ಬಿಟ್ಟರೆ ನಿನಗೆ ಅಪಾಯ ಬಂದೀತು” ಎಂದು ಎಚ್ಚರಿಸಿ ಹೊರಟುಹೋದನು. ನಾನು ಆ ಜನ ರೊಂದಿಗೆ ಆಹಾರಸಾಮಗ್ರಿಗಳನ್ನು ಜತೆಗೊಳಿಸಿ, ನಾವೆಲ್ಲರು ಒಂದು ಕಾಡನ್ನು ಸೇರಿದೆವು. ಅಲ್ಲಿ ಆಕಾಶವನ್ನು ಮುಟ್ಟುವಂತಿರುವ ದೊಡ್ಡ ಮರಗಳಿದ್ದುವು. ಅವಕ್ಕೆ ತುದಿಯಲ್ಲಿ ಕೆಲವು ಉದ್ದವಾದ ಗರಿಗಳಂತಿರುವ ಎಲೆಗಳಿದ್ದವೇ ಹೊರತು, ಕೊಂಬೆರೆಂಬೆಗಳು ಇರಲಿಲ್ಲ. ಆ ಎಲೆಗಳ ಬುಡ ದಲ್ಲಿ ತಲೆಯಷ್ಟು ಗಾತ್ರದ ದುಂಡಗಾದ ಕಾಯಿಗಳಿದ್ದುವು. ಆ ಕಾಡಿನಲ್ಲಿ ತುಂಬಾ ಕಪಿಗಳು ಇದ್ದುವು. ಇವು ನಮ್ಮನ್ನು ನೋಡಿದೊಡನೆ ಆ ಮರಗಳನ್ನು ಹತ್ತಿ ತುದಿಗೆ ಹೋಗಿ ಹಲ್ಲುಕಿರಿಯುತ್ತ ಕುಳಿತುಕೊಂಡುವು. ನಾನೂ ಆ ಜನರೂ ಈ ಮಂಗಗಳಿಗೆ ಕಲ್ಲುಗಳನ್ನು ಎಸೆಯಲು, ಅವು ಸಿಟ್ಟಾಗಿ, ಆ ಮರಗಳ ಕಾಯಿಗಳನ್ನು ಕಿತ್ತು ನಮ್ಮ ಕಡೆಗೆ ಎಸೆದುವು. ಹಾಗೆ ಕೆಳಗೆ ಬಿದ್ದ ಕಾಯಿಗಳನ್ನು ನಾವು ಆಯ್ದು, ಚೀಲಗಳಲ್ಲಿ ತುಂಬಿಸಿ ಆ ವರ್ತಕನಿಗೆ ತಂದೊಪ್ಪಿಸಲು, ಅವನು ನನಗೆ ಕೈತುಂಬಾ ಹಣಕೊಟ್ಟನು. ಹೀಗೆ ಕೆಲವು ದಿನಗಳಲ್ಲಿಯೇ ನಾನು ಧನವಂತನಾಗಿ ಆ ವರ್ತಕನ ಉಪ ಕಾರವನ್ನು ಸ್ಮರಿಸುತ್ತಾ, ಇನ್ನೊಂದು ಹಡಗನ್ನು ಬಾಡಿಗೆಗೆ ಮಾಡಿಕೊಂಡು ಕನ್ಯಾಕುಮಾರಿಯ ವರೆಗೆ ಹೋದೆನು. ಅಲ್ಲಿ ಸಮುದ್ರದಲ್ಲಿ ಮುಳುಗು ವವರನ್ನು ಗೊತ್ತುಮಾಡಿ, ಅವರಿಂದ ಕಡಲಿನಲ್ಲಿರುವ ಮುತ್ತುಗಳನ್ನು ತೆಗಿಸಿ

ದೆನು. ದೊಡ್ಡ ದೊಡ್ಡ ಮುತ್ತುಗಳನ್ನು ಸಂಗ್ರಹಿಸಿ ವ್ಯಾಪಾರಮಾಡಿ ಹೇರಳ ಹಣವನ್ನು ಗಳಿಸಿದೆನು. ಆ ಮೇಲೆ ಮನೆಗೆ ಹೋಗಬೇಕೆಂಬ ಆಸೆಯು ನನ್ನನ್ನು ಬಲವತ್ತರವಾಗಿ ಪೀಡಿಸಲು, ಹಡಗು ಹತ್ತಿ ಬಾಲ್ಸೋರಕ್ಕೆ ಬಂದು ತಲಪಿ ನನ್ನ ಊರನ್ನು ಸೇರಿದೆನು.

ಆರನೆಯ ಪ್ರಯಾಣ

ಒಂದು ವರ್ಷದ ವರೆಗೆ ನಾನು ನಮ್ಮ ಊರುಮನೆಯಲ್ಲಿ ಉಂಡು ತಿಂದು ಸುಖವಾಗಿದ್ದೆನು. ಆದರೆ ಬರೆ ವೈಗಳ್ಳನಾಗಿ ಜೀವಿಸುವುದು ನನಗೆ ಹಿತವಾಗಿ ಕಾಣಲಿಲ್ಲ. ನನಗೆ ಪ್ರಾಯವು ಇನ್ನೂ ದಾಟಿಹೋಗಿರಲಿಲ್ಲ. ಇನ್ನೂ ಹಣವನ್ನು ಗಳಿಸಬೇಕು, ದೇಶಸಂಚಾರ ಮಾಡಬೇಕು, ಜನರ ಸ್ಥಿತಿಗತಿ ಅರಿಯಬೇಕು ಎಂಬ ಆಸೆಯು ನನ್ನನ್ನು ಕಾಡುತಿತ್ತು. ಈ ಸಲ ಬಾಗ್ದಾದದಿಂದ ನೆಲದಾರಿಯಾಗಿಯೇ ಪರ್ಷಿಯ ರಾಜ್ಯಕ್ಕೆ ಹೋಗಿ, ಅಲ್ಲಿಂದ ಹಿಂದುಸ್ಥಾನಕ್ಕೆ ಹೋದೆನು. ಆ ಮೇಲೆ ಒಂದು ರೇವಿನಲ್ಲಿ ಹಡಗನ್ನು ಹತ್ತಿ, ಬಹಳ ದಿವಸಗಳ ವರೆಗೆ ನೆಲವನ್ನು ಕಾಣದೆ, ಸಮುದ್ರ ಮಾರ್ಗವಾಗಿ ಪಯಣವನ್ನು ಬೆಳಿಸಿದೆನು. ಆಗ ಒಂದು ದಿನ ಫಕ್ಕನೆ ಹಡಗಿನ ಕರ್ಣಧಾರನು ಚುಕ್ಕಾಣಿಯನ್ನು ಬಿಟ್ಟು, ತನ್ನ ತಲೆಗೆ ಸುತ್ತಿದ ರುಮಾಲನ್ನು ನೆಲಕ್ಕೆ ಒಗೆದು, ಎದೆಯನ್ನು ಎರಡೂ ಕೈಗಳಿಂದ ಬಡಕೊಳ್ಳುತ್ತ ಅಳತೊಡಗಿದನು. ನಾವೆಲ್ಲರೂ ಚಕಿತರಾದೆವು. ಹೀಗೆ ಅವನು ಹಂಬಲಿಸುವುದಕ್ಕೆ ಕಾರಣವೇನೆಂದು ಕೇಳಲಾಗಿ “ಅಯ್ಯಾ, ನಾವು ಹತ್ತಿದ ಹಡಗು ಕಡಲಿನ ಒಳಗೆ ಗುಪ್ತವಾಗಿ ಹರಿಯುವ ಯಾವುದೋ ಒಂದು ಸೆಳವಿನಲ್ಲಿ ಬಡಕೊಂಡು ಹೋಗುತ್ತಿದೆ. ಇನ್ನು ಒಂದು ತಾಸಿನೊಳಗೆ ನಮ್ಮ ಗತಿ ಏನಾದೀತು ಎಂದು ಹೇಳಲಾರೆನು” ಅಂದನು. ಅಷ್ಟರಲ್ಲಿ ಗುಡುಗಿನಂಥ ಭಯಂಕರವಾದ ಒಂದು ಶಬ್ದವು ಕೇಳಿಸಿತು. ಹಡಗು ಫಕ್ಕನೆ ಒಂದು ದ್ವೀಪದ ದಡಕ್ಕೆ ತಗಲಿ ಚೂರುಚೂರಾಯಿತು. ನಾವೂ ಹೇಗೂ ಈಸಿ ದಡವನ್ನು ಸೇರಿದೆವು.

ಆಗ ಆ ಹಡಗಿನಲ್ಲಿದ್ದ ಒಬ್ಬ ಮುದಿ ನಾವಿಕನು—“ಅಯ್ಯಾ! ಇನ್ನು ನಮ್ಮ ಜೀವಕಾಲವನ್ನು ಇಲ್ಲೇ ಕಳೆಯಬೇಕಾಗಿ ಬಂದೀತು. ಈ ದ್ವೀಪದಲ್ಲಿ ಬಂದು ಬಿದ್ದವರು ಯಾರೂ ಈ ವರೆಗೆ ಇಲ್ಲಿಂದ ತಪ್ಪಿಸಿ

ಕೊಂಡು ಹೋದುದಿಲ್ಲ. ನಮ್ಮ ಸಮಾಧಿಗಳನ್ನು ನಾವೇ ಮಾಡಿಟ್ಟು ಕೊಳ್ಳುವುದು ಲೇಸು" ಎಂದು ಹೇಳಿದನು. ಆಗ ನಮ್ಮೊಡನೆ ಇದ್ದವ ರೆಲ್ಲರು ತಂತಮ್ಮ ಮಕ್ಕಳುಮರಿಗಳನ್ನು ನೆನಸಿ, "ಇನ್ನು ಅವರನ್ನು ಕಾಣಲು ಆಸೆ ಇಲ್ಲವಲ್ಲಾ" ಎಂದು ಮರುಗಿ, ಒಬ್ಬರನ್ನು ಒಬ್ಬರು ತಬ್ಬಿಕೊಂಡು, ಸಾಯುವಾಗಲೂ ಒಬ್ಬರನ್ನೊಬ್ಬರು ಅಗಲಬಾರದೆಂದು ಆಣೆಯಿಟ್ಟು ಕೊಂಡು, ದಡದಿಂದ ಮುಂದರಿಸಿ ನಡೆದರು, ಮುಂದರಿಸುತಿದ್ದ ಹಾಗೆ ನಮ್ಮಲ್ಲಿದ್ದ ಒಂದಿಷ್ಟು ಧೈರ್ಯವು ಕೂಡ ನಮ್ಮನ್ನು ತೊಲಗಿ ಹೋಯಿತು. ಎಲ್ಲಿ ನೋಡಿದರೂ ಮನುಷ್ಯರ ಮೂಳೆಗಳು ಗುಪ್ಪೆಗುಪ್ಪೆ ಯಾಗಿ ಬಿದ್ದಿದ್ದುವು. ತಲೆಬುರುಡೆಗಳು ತೆಂಗಿನ ಗೆರಟೆಗಳಂತೆ ಕಾಲ ಬುಡಕ್ಕೆ ಎಡವುತಿದ್ದುವು. ಅವುಗಳೊಂದಿಗೆ ನವರತ್ನಗಳೂ ನಗನಾಣ್ಯಗಳೂ ಅಲ್ಲಲ್ಲಿ ಕಣ್ಣನ್ನು ಕುಕ್ಕುತಿದ್ದುವು. ಇಲ್ಲಿ ಲೆಕ್ಕವಿಲ್ಲದ ಜನರು ಬಂದು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರೆಂಬುದು ನಮಗೆ ನಿಶ್ಚಯವಾಯಿತು.

ಈ ನಡುಗಡ್ಡೆಯಲ್ಲಿ ಇನ್ನೊಂದು ವಿಚಿತ್ರವನ್ನು ಕಂಡೆವು. ಇತರ ದೇಶಗಳಲ್ಲಿ ಹೊಳೆಗಳು ಕಡಲನ್ನು ಸೇರುತ್ತಿವೆ; ಇಲ್ಲಿ ಒಂದು ಸಿಹಿನೀರಿನ ಪ್ರವಾಹವು ಕಡಲಿನೊಳಗಿಂದ ಹೊರಟು ಒಳದೇಶಕ್ಕೆ ಬಹಳ ದೂರಕ್ಕೆ ಹರಿದು, ಬಂಡೆಯೊಳಗಿನ ಒಂದು ದೊಡ್ಡ ಗುಹೆಯೊಳಗೆ ಪ್ರವಹಿ ಸುತಿತ್ತು. ಇದನ್ನು ಕಂಡು ನಮಗೆ ಒಂದು ಆಲೋಚನೆಯು ಹುಟ್ಟಿತು. "ಈ ಹೊಳೆಯಲ್ಲಿ ನಾವು ತೆಪ್ಪಕಟ್ಟಿ ತೇಲಬಿಟ್ಟರೆ, ಎಲ್ಲಿಯಾದರೂ ಜನ ರಿರುವ ದೇಶಕ್ಕೆ ಹೋಗವುದೋ ನೋಡೋಣ" ಎಂದು ಯೋಚಿಸಿ, ನಾವು ನಾಲ್ಕೈದು ತೆಪ್ಪಗಳನ್ನು ಆ ಹೊಳೆಯ ದಡದಲ್ಲಿರುವ ಬಿದಿರು ಗಳಿಂದ ಕಟ್ಟಿದೆವು. ಮತ್ತು ರಾಶಿಯಾಗಿ ಬಿದ್ದಿದ್ದ ನವರತ್ನಗಳನ್ನು ಮೂಟೆ ಕಟ್ಟಿ ತೆಪ್ಪಗಳ ಮೇಲೆ ಇಟ್ಟು, ಅಲ್ಲಲ್ಲಿ ಸಿಕ್ಕಿದ ಹಣ್ಣುಹಂಪಲುಗಳನ್ನು ತುಂಬಿಸಿ, ನಾವು ಕಳಿತುಕೊಂಡು ತೆಪ್ಪಗಳನ್ನು ತೇಲಬಿಟ್ಟೆವು. ತೆಪ್ಪಗಳ ಮೇಲೆ ನಾವು ನಿಂತರೂ ಸುಖವಾಗಿ ಹೋಗುವಷ್ಟು ಆ ಗವಿಯು ಆಳ ವಾಗಿತ್ತು. ಒಂದೆರಡು ಕಡೆಗಳಲ್ಲಿ ಮಾತ್ರ ಆ ಗವಿಯ ಕಮಾನಿ ನಲ್ಲಿ ಹೊರಚಾಚಿ ಬಂದ ಬಂಡೆಗಲ್ಲುಗಳು ನಮ್ಮನ್ನು ತಿವಿದು ಬಗೆದು ಬಿಟ್ಟುವು. ಕೆಲದಿನಗಳ ವರೆಗೆ ನಾವು ಸೂರ್ಯನ ಬೆಳಕನ್ನು ಕಾಣದೆ, ಈ ಗವಿಯಲ್ಲಿಯೇ ತೆಪ್ಪಗಳ ಮೇಲೆ ಪ್ರಯಾಣ ಬೆಳಿಸಿದೆವು.

ಕಡೆಗೆ ನಮ್ಮ ಆಹಾರವು ಮುಗಿದು ಹೋಗಿ ನಾವು ಬಳಲಿ ಆ ತೆಪ್ಪಗಳ ಮೇಲೆ ಮಲಗಿಬಿಟ್ಟೆವು. ನಮಗೆಲ್ಲರಿಗೂ ಗಾಢನಿದ್ರೆ ಹತ್ತಿತು.

ಎಷ್ಟು ಸಮಯದ ವರೆಗೆ ಹಾಗೆ ಮಲಗಿದ್ದೆನೆಂದು ನನಗೆ ಗೊತ್ತಾಗಲಿಲ್ಲ. ನಾನು ಎಚ್ಚತ್ತಾಗ ಸೂರ್ಯನು ಆಕಾಶದಲ್ಲಿ ಚೆನ್ನಾಗಿ ಮೇಲೇರಿದ್ದನು. ನಾನು ಕೂತಿರುವ ತೆಪ್ಪವು ಒಂದು ಮಾತ್ರ ಅಲ್ಲಿ ಇತ್ತು. ಅದನ್ನು ಯಾರೋ ದಡದ ಬಳಿಯ ಒಂದು ಮರದ ಬುಡಕ್ಕೆ ಕಟ್ಟಿಹಾಕಿದ್ದರು. ಸಮೀಪದಲ್ಲಿ ಕೆಲವು ಕರಿಯ ಜನರು ನಿಂತಿದ್ದರು. ಅವರು ನನ್ನನ್ನು ನೋಡಿ ದಡದ ಸಮೀಪಕ್ಕೆ ಬಂದರು. ನಾನು ಅವರ ಕಾಲಿಗೆ ಬಿದ್ದು ವಂದಿಸಿದೆನು. ನಾನು ಹೇಳಿದ ಮಾತುಗಳು ಮಾತ್ರ ಅವರಿಗೆ ಗೊತ್ತಾಗಲಿಲ್ಲ. ಆಗ ನಾನು ಅರಬಿಭಾಷೆಯಿಂದ ಅವರ ಹತ್ತಿರ "ನೀವು ಯಾರು? ಈ ದೇಶ ಯಾವುದು?" ಎಂದು ಪ್ರಶ್ನಿಸಿದೆನು. ಅವರಲ್ಲೊಬ್ಬನಿಗೆ ಅರಬಿ ಮಾತು ಸ್ವಲ್ಪ ಬರುತಿತ್ತು. ಅವನು ನನ್ನ ಪ್ರಶ್ನೆಗಳಿಗೆ ಒಂದೆರಡು ಉತ್ತರಗಳನ್ನು ಕೊಟ್ಟನು. ಆ ಮೇಲೆ ನಾನು ತುಂಬ ಹಸಿದಿರುವೆನೆಂದು ತಿಳಿಸಲು, ಅವರು ನನ್ನನ್ನು ತೆಪ್ಪದಿಂದ ಇಳಿಸಿ, ಒಂದು ಮನೆಗೆ ಕರೆದುಕೊಂಡು ಹೋಗಿ, ನನಗೆ ಬೇಕಾದ ತಿಂಡಿಯನ್ನು ಕೊಟ್ಟರು.

ನಾನು ಸ್ವಲ್ಪ ದಣುವಾರಿಸಿಕೊಂಡ ಮೇಲೆ ನನ್ನ ವೃತ್ತಾಂತವನ್ನು ಅವರಿಗೆ ತಿಳಿಸಿದೆನು. ಅವರು ನನ್ನನ್ನು ಆ ಊರ ಅರಸನ ಬಳಿಗೆ ಕರೆದುಕೊಂಡು ಹೋದರು. ಆ ಅರಸನು ಒಂದು ದೊಡ್ಡ ಅರಮನೆಯಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದನು. ಅವನ ಸುತ್ತಲು ಕಾವಲುಗಾರರೂ, ಮಂತ್ರಿ ಸೇನಾಪತಿ ಮುಂತಾದವರೂ ಕುಳಿತು ದರಭಾರು ನಡೆಯುತಿತ್ತು. ನಾನು ಒಳಗೆ ಪ್ರವೇಶಮಾಡಿದೊಡನೆ ನೆಲಮುಟ್ಟಿ ಮೂರು ಸಲ ಸಲಾಂ ಮಾಡಿ, ನಾನು ತಂದ ನವರತ್ನಾದಿಗಳನ್ನು ಕಾಣಿಕೆಯಾಗಿ ಒಪ್ಪಿಸಿದೆನು. ಅರಸನು ನನ್ನ ಸಮಾಚಾರವನ್ನು ಆ ಕರಿಯ ಕಾವಲುಗಾರರಿಂದ ತಿಳಿದು, ನನ್ನನ್ನು ತಕ್ಕ ರೀತಿಯಲ್ಲಿ ಸತ್ಕರಿಸಿ, ನಮ್ಮ ದೇಶದ ಸ್ಥಿತಿಗತಿಗಳನ್ನು ಕುರಿತು ಪ್ರಶ್ನೆ ಮಾಡಿದನು. ನನ್ನ ರತ್ನಾದಿಗಳನ್ನು ಕಂಡು ಒಂದೊಂದನ್ನೇ ಪರೀಕ್ಷಿಸಿ ತುಂಬಾ ಸಂತೋಷಪಟ್ಟು, ನನಗೆ ಜರತಾರಿನ ಒಂದು ಅಂಗಿಯನ್ನೂ ಒಂದು ರುಮಾಲನ್ನೂ ಆನೆಯ ಜಂತದಿಂದ ಮಾಡಿದ ಕೆಲವು

ಅಮೂಲ್ಯ ವಸ್ತು ಒಡವೆಗಳನ್ನೂ ಇನಾಮಾಗಿ ಕೊಟ್ಟು, ಆ ರಾಜಧಾನಿಯಲ್ಲಿಯೇ ಕೆಲವು ದಿನ ಉಳುಕೊಳ್ಳಬೇಕೆಂದು ಒತ್ತಾಯ ಮಾಡಿದನು. ಹೀಗಾಗಿ ನಾನು ಕೆಲವು ದಿನ ಅಲ್ಲಿ ಉಳಿದೆನು. ಆ ದ್ವೀಪದ ಹೆಸರು ಸೆರಂಡಿಬ.

ಈ ಸೆರಂಡಿಬ ದ್ವೀಪದಲ್ಲಿ ನಾನು ಕೆಲವು ದಿನವಿದ್ದು, ನನ್ನ ದೇಶಕ್ಕೆ ಹೋಗಿ ಬರುತ್ತೇನೆಂದು ಅರಸನೊಡನೆ ಅಪ್ಪಣೆ ಬೇಡಿದನು. ಆಗ ಅವನು ಖಲೀಫರಾದ ಹಾರೂನ ಎಲರಷೀದರಿಗೆ ಒಂದು ಪತ್ರವನ್ನೂ ಅದರೊಂದಿಗೆ ಅನೇಕ ಉಡುಗೊರೆಗಳನ್ನೂ ಕೊಟ್ಟನು. ಕೆತ್ತನೆಯ ಕೆಲಸದ ಜಂತದ ಒಡವೆಗಳು; ಒಂದೇ ಕೆಂಪಿನಿಂದ ಮಾಡಿದ್ದು ಅರ್ಧ ಅಡಿಯುಷ್ಟು ಎತ್ತರದ ನೇರಳೆ ಹಣ್ಣಿನಷ್ಟು ತೂಕದ ಮಾಣಿಕ್ಯದ ಒಂದು ಪಾನಪಾತ್ರೆ, ಬೆಳದಿಂಗಳಂತೆ ಹೊಳೆಯುವ ಮುತ್ತುಗಳನ್ನೂ ಕೆತ್ತಿದ ಪಾನಪಾತ್ರೆ, ರೋಗ ಪರಿಹಾರಕವಾಗಿಯೂ ಹಾಸಿಗೆಗೆ ಉಪಯೋಗಿಸತಕ್ಕದ್ದಾಗಿಯೂ ಇರುವ ಒಂದು ದೊಡ್ಡ ಚರ್ಮ, ಇಂಥ ಅನೇಕ ಉಡುಗೊರೆಗಳನ್ನು ನನ್ನೊಡನೆ ಕೊಟ್ಟನು. ನಾನು ಅವನ್ನು ತೆಗೆದುಕೊಂಡು ಹಡಗು ಹತ್ತಿ, ದಾರಿಯಲ್ಲಿ ಏನೊಂದು ಗಂಡಾಂತರವಿಲ್ಲದೆ ಬಾಲ್ಸೋರಕ್ಕೆ ಮುಟ್ಟಿ, ಅಲ್ಲಿಂದ ಬಾಗ್ದಾದವನ್ನು ಸೇರಿ, ಆ ಉಡುಗೊರೆಯ ಸಾಮಾನುಗಳನ್ನೆಲ್ಲಾ ಖಲೀಫರಿಗೆ ಒಪ್ಪಿಸಿದೆನು. ಆಗ ಅವರು ಪರಮಾಶ್ಚರ್ಯಪಟ್ಟು ಆ ಪತ್ರವನ್ನು ಒಡೆದು ಓದಿಸಿ, ಆ ಸಾಮಾನುಗಳನ್ನು ಒಂದೊಂದಾಗಿ ಎತ್ತಿ ನೋಡಿ, ಚೆನ್ನಾಗಿ ಪರೀಕ್ಷಿಸಿ ತಲೆದೂಗಿದರು. ಅನಂತರ ಈ ಉಡುಗೆರೆಯನ್ನು ಕಳುಹಿಸಿದ ಅರಸನ ಸಮಾಚಾರವನ್ನು ತನಗೆ ಒಂದಿಷ್ಟು ಹೇಳಬೇಕೆಂದು ಕುತೂಹಲ ಪಡಲು ನಾನು ಕಂಡದ್ದೆಲ್ಲವನ್ನು ವಿಸ್ತಾರವಾಗಿ ಹೇಳಿದೆನು. ಖಲೀಫರು ನನ್ನನ್ನು ಸತ್ಕರಿಸಿ ಮನೆಗೆ ಕಳುಹಿಸಿಕೊಟ್ಟರು.

ಏಳನೆಯ ಪ್ರಯಾಣ

ಒಂದು ದಿನ ನನ್ನ ಗೆಳೆಯರೊಂದಿಗೆ ವಿನೋದದ ಮಾತುಕಥೆಗಳನ್ನು ಆಡುತ್ತಿರುವಾಗ ಅರಮನೆಯ ಅಧಿಕಾರಿಯು “ ಖಲೀಫರ ಆಜ್ಞೆಯಾಗಿದೆ, ನೀನು ಈಗಲೆ ಅವರ ಸನ್ನಿಧಿಗೆ ಬರಬೇಕು ” ಎಂದು ನನಗೆ ತಿಳಿಸಿದನು. ನಾನು ಅವಸರದಿಂದ ಆ ಅಧಿಕಾರಿಯೊಡನೆ ನಡೆದೆನು.

ಅಲ್ಲಿ ದಿವ್ಯ ಸಿಂಹಾಸನದ ಮೇಲೆ ಖಲೀಫರನ್ನು ಕಂಡು, ಮೂರು ಸಲ ನೆಲಮುಟ್ಟಿ ಸಲಾಂ ಮಾಡಿ ಕೈಜೋಡಿಸಿ ನಿಂತೆನು. ಆಗ ಅವರು "ಅಯ್ಯಾ! ಸಿಂದಬಾದನೇ! ನೀನು ಸೆರಂಡಿಬ ದ್ವೀಪದಿಂದ ನನಗೆ ಪತ್ರವನ್ನೂ ಬಹುಮಾನವನ್ನೂ ತಂದಿರುವೆ. ಅದಕ್ಕೆ ಪ್ರತಿಯಾಗಿ ಇಲ್ಲಿಂದ ನನ್ನ ಪತ್ರವನ್ನೂ ಉಡುಗೊರೆಗಳನ್ನೂ ಅವರಿಗೆ ಒಪ್ಪಿಸಬೇಕು" ಎಂದರು.

ಆಗ ನಾನು ಸಮುದ್ರ ಪ್ರಯಾಣದಲ್ಲಿ ಈ ವರೆಗೆ ನನಗೆ ಉಂಟಾದ ಸಂಕಷ್ಟಗಳನ್ನು ಸಂಕ್ಷೇಪವಾಗಿ ಹೇಳಿ, ಇನ್ನು ನನ್ನ ಆಯುಸ್ಸನ್ನು ನನ್ನ ಮನೆಯಲ್ಲಿಯೇ ಕಳೆಯಬೇಕೆಂದು ನಿಶ್ಚಯಮಾಡಿದ್ದೇನೆ" ಎಂದು ಉತ್ತರ ಕೊಟ್ಟೆನು. ಖಲೀಫರು ನನ್ನ ಕಥೆಯನ್ನು ಕೇಳಿ ತುಂಬಾ ಚಕಿತರಾದರೂ "ಸಿಂದಬಾದನೆ! ಈ ಮಹತ್ಕಾರ್ಯವು ನಿನ್ನಿಂದಲ್ಲದೆ ಇತರರಿಂದ ಸಾಧ್ಯವಲ್ಲ. ಈ ಸಲ ನನ್ನ ಮಾತನ್ನು ನಡಿಸಬೇಕು. ನಿನ್ನ ಮೇಲೆ ದೇವರ ಕೃಪೆಯಿದೆ. ನಿನ್ನ ಪ್ರಾಣಕ್ಕೆ ಏನೂ ಅಪಾಯ ಬರಲಾರದು" ಎಂದು ನನ್ನನ್ನು ಬಲವಂತ ಪಡಿಸಿದರು. ನಾನು ನಿರ್ವಾಹವಿಲ್ಲದೆ ಒಪ್ಪಿಕೊಂಡು ಅವರು ಕೊಟ್ಟ ವಸ್ತು ಒಡವೆಗಳನ್ನು ಒಂದು ಹಡಗಿನಲ್ಲಿ ತುಂಬಿಸಿ, ಸೆರೆಂಡಿಬ ದ್ವೀಪಕ್ಕೆ ತಲಪಿ, ಖಲೀಫರ ಪತ್ರವನ್ನೂ ಉಡುಗೊರೆಗಳನ್ನೂ ಅಲ್ಲಿಯ ರಾಜನಿಗೆ ಒಪ್ಪಿಸಿದೆನು. ಆ ರಾಜನು ನನ್ನನ್ನು ತಕ್ಕ ರೀತಿಯಿಂದ ಸನ್ಮಾನಿಸಿ ಕೆಲವು ದಿನ ಇರಿಸಿಕೊಂಡ ಮೇಲೆ, ಅವನ ಅಪ್ಪಣೆಯನ್ನು ಪಡೆದು ನಾನು ನಮ್ಮ ದೇಶಕ್ಕಾಗಿ ಹೊರಟೆನು.

ದಾರಿಯಲ್ಲಿ ಹಡಗುಗಳ್ಳರು ನಮ್ಮ ಹಡಗಿನೊಳಗೆ ನುಗ್ಗಿ, ಹಡಗಿನ ನಾಯಕನನ್ನೂ ಇತರ ಕಲಾಸಿಗಳನ್ನೂ ಕೊಂದು, ಹಡಗಿನಲ್ಲಿದ್ದ ವಸ್ತುಗಳನ್ನೂ ದೋಚಿಕೊಂಡು, ಅಳಿದುಳಿದ ಕೆಲವು ಜನರನ್ನು ಗುಲಾಮರನ್ನಾಗಿ ಮಾರಿಬಿಟ್ಟರು. ನಾನು ಒಬ್ಬ ಧನಿಕನ ಗುಲಾಮನಾದೆನು. ಅವನು ನನ್ನನ್ನು ಮನೆಗೆ ಕರೆದುಕೊಂಡು ಹೋಗಿ, ನನ್ನ ಮೇಲೆ ಅಕ್ಕರೆಯಿಂದ ಅನ್ನಪಾನಾದಿಗಳನ್ನು ಕೊಟ್ಟು, ನಾನು ಗುಲಾಮನೆಂಬ ಭೇದ ತೋರಿಸದೆ ನೋಡಿಕೊಳ್ಳುತಿದ್ದನು. ಕೆಲವು ದಿನಗಳ ಮೇಲೆ, "ನಿನಗೆ ಏನು ಕೆಲಸ ಗೊತ್ತಿದೆ?" ಎಂದು ಅವನು ನನ್ನನ್ನು ಕೇಳಿದನು. "ನಾನು ವರ್ತಕನು, ನನಗೆ ಏನೂ ತಿಳಿಯದು" ಎಂದೆನು. ನೀನು ಬಾಣ ಎಸೆಯಬಲ್ಲೆಯಾ?

ಎಂದು ಅವನು ಮತ್ತೆ ಕೇಳಿದನು. “ನಾನು ಹುಡುಗನಿದ್ದಾಗ ಬಿಲ್ಲು ವಿದ್ಯೆಯ ಅಭ್ಯಾಸ ಮಾಡಿದ್ದೆನು” ಎಂದು ಉತ್ತರಕೊಟ್ಟೆನು.

ಆಗ ಅವನು ಮರುದಿನ ನನ್ನನ್ನು ಒಂದು ಆನೆಯ ಮೇಲೆ ಕುಳ್ಳಿರಿಸಿ ಅಲ್ಲಿ ಕೆಲವು ಮೈಲು ದೂರದಲ್ಲಿದ್ದ ಕಾಡಿಗೆ ಕರೆದುಕೊಂಡು ಹೋಗಿ, ಒಂದು ದೊಡ್ಡ ಮರವನ್ನು ತೋರಿಸಿ, “ಇಗೋ, ಈ ಮರದ ಮೇಲೆ ಹತ್ತಿಕೊಂಡು ಈ ಬಿಲ್ಲುಬಾಣಗಳನ್ನು ಹಿಡಿದು ಕೂತಿರು· ಇಲ್ಲಿ ಹಾದುಹೋಗುವ ಆನೆಗಳನ್ನು ಗುರಿಯಿಟ್ಟು ಹೊಡೆದು, ಆನೆ ಬಿದ್ದಾಕ್ಷಣ ನನಗೆ ತಿಳಿಸು” ಎಂದು ಹೇಳಿ ಹೊರಟು ಹೋದನು. ಮರುದಿನ ಬೆಳಗ್ಗೆ ಅಲ್ಲಿ ಒಂದು ಆನೆಯ ಹಿಂಡು ದಾಟಿಹೋಗುತ್ತಿರಲು, ನಾನು ಅಂಬುಹೊಡೆದು ಒಂದು ಆನೆಯನ್ನು ನೆಲಕ್ಕೆ ಉರುಳಿಸಿದೆನು. ಉಳಿದ ಆನೆಗಳು ಘೀಳಿಟ್ಟು ಓಡಿಹೋದುವು. ಆನೆ ಬಿದ್ದ ಸಮಾಚಾರವನ್ನು ನಾನು ನನ್ನ ವರ್ತಕನಿಗೆ ತಿಳಿಸಲು, ಅವನು ಸಂತೋಷಪಟ್ಟು ನನ್ನನ್ನು ಕೊಂಡಾಡಿ, ಆನೆ ಬಿದ್ದಲ್ಲಿಗೆ ಬಂದು ಅದನ್ನು ಮಣ್ಣಿನಿಂದ ಮುಚ್ಚಿಸಿದನು. ಆನೆ ಕೊಳೆತು ಮಣ್ಣಾದ ಮೇಲೆ ಅದರ ಮೂಳೆಗಳನ್ನು ತೆಗಿಸಿ ಮಾರುವುದೇ ಅವನ ಉದ್ದೇಶವಾಗಿತ್ತು. ಅನಂತರ ನಾನು ಎರಡು ತಿಂಗಳ ವರೆಗೆ ಇದೇ ರೀತಿ ಮಾಡುತ್ತಿರಲು, ಒಂದು ದಿನ ಆನೆಗಳ ಹಿಂಡು, ಎಂದಿನಂತೆ ನಾನಿದ್ದ ಮರದ ಅಡಿಗೆ ಬಂದು, ಸೊಂಡಿಲುಗಳನ್ನು ಎತ್ತಿ, ನನ್ನನ್ನು ನೋಡಿ ಭಯಂಕರ ರೀತಿಯಿಂದ ಘೀಳಿಡ ತೊಡಗಿದುವು. ಆಗ ನಾನು ಬೆದರಿ ಎಚ್ಚರತಪ್ಪಿದವನಾದೆನು; ನನ್ನ ಕೈಯಲ್ಲಿರುವ ಬಿಲ್ಲುಬಾಣಗಳು ಜಗುಳಿ ಕೆಳಗೆ ಬಿದ್ದುವು. ಅಷ್ಟರೊಳಗೆ ಒಂದು ತುಂಟ ಆನೆಯು ಸಿಟ್ಟಿನಿಂದ ತನ್ನ ಸೊಂಡಿಲಿನಿಂದ ಆ ಮರವನ್ನು ಸುತ್ತಿ ಬೇರುಸಮೇತ ಕಿತ್ತು ಬಿಟ್ಟಿತು. ನಾನು ಕೆಳಕ್ಕೆ ಧೊಪ್ಪನೆ ಬಿದ್ದೆನು. ಆಗ ಅದು ನನ್ನನ್ನು ಸೊಂಡಿಲಿನಿಂದ ಎತ್ತಿಕೊಂಡು ತನ್ನ ಬೆನ್ನಿನ ಮೇಲೆ ಇರಿಸಿ, ಸ್ವಲ್ಪ ಹೊತ್ತಿನ ಮೇಲೆ, ಒಂದು ಕೋಡುಗಲ್ಲಿನ ಮೇಲೆ ನನ್ನನ್ನು ಹಾಕಿಬಿಟ್ಟು, ಕಾಡಿನ ದಾರಿಯನ್ನು ಹಿಡಿಯಿತು.

ಅದು ಹಳ್ಳಪ್ರದೇಶವಾಗಿತ್ತು. ಅಲ್ಲಿ ಧಾರಾಳವಾಗಿ ಆನೆಯ ಎಲುಬುಗಳು ರಾಶಿರಾಶಿಯಾಗಿ ಬಿದ್ದಿದ್ದುವು. ಅವನ್ನು ಆಶ್ಚರ್ಯದಿಂದ ನಾನು ನೋಡುತ್ತಾ ಇರಲು ನನ್ನ ಯಜಮಾನನು ನನ್ನನ್ನು ಹುಡುಕುತ್ತಾ ಅಲ್ಲಿಗೆ

ಬಂದನು. ನಾನು ಜೀವಂತನಾಗಿದ್ದೇನೆಂದು ತಿಳಿದು ಸಂತೋಷಪಟ್ಟನು. ಅವನು ನನ್ನ ಸಮಾಚಾರವನ್ನೆಲ್ಲ ಕೇಳಿ, ಸುತ್ತಮುತ್ತಲಿದ್ದ ಆನೆಮೂಳೆಗಳ ರಾಶಿಯನ್ನು ನೋಡಿ ಚಕಿತನಾದನು. ಆನೆಯು ಈ ಹಳ್ಳಪ್ರದೇಶದಲ್ಲಿರುವ ಎಲುಬುಗಳ ರಾಶಿಯನ್ನು ತೋರಿಸಿ, ಅದರಿಂದ ತಮ್ಮ ಪ್ರಾಣಾಪಾಯವನ್ನು ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ನನ್ನನ್ನು ಎತ್ತಿಕೊಂಡು ಬಂದಿತ್ತೆಂದು ನನಗೆ ಗೊತ್ತಾಯಿತು. ನನ್ನ ಮೂಲಕ ಇಂಥ ಧನರಾಶಿ ದೊರಕಿದುದರಿಂದ ಆ ವರ್ತಕನು ನನ್ನನ್ನು ಗುಲಾಮತನದಿಂದ ಬಿಡುಗಡೆ ಮಾಡಿ, ನನಗೆ ಬೇಕಾದಷ್ಟು ದ್ರವ್ಯವನ್ನು ಕೊಟ್ಟು, ನನ್ನ ಊರಿಗೆ ಕಳುಹಿಸುವುದಕ್ಕೆ ಅಣಿ ಮಾಡಿದನು. ಅವನು ಕೊಟ್ಟ ದ್ರವ್ಯ ಸರಕುಗಳನ್ನು ತುಂಬಿಕೊಂಡು ನಮ್ಮ ದೇಶಕ್ಕೆ ಬಂದು ಮುಟ್ಟಿ ಖಲೀಫರನ್ನು ಕಂಡು, ನಡೆದ ವೃತ್ತಾಂತವನ್ನು ಅರಿಕೆಮಾಡಿದೆನು. ಖಲೀಫರು ನನ್ನ ಸಾಹಸ ಸಂಕಷ್ಟಗಳನ್ನು ಕೇಳಿ ಪರಿತಾಪಗೊಂಡು, ನನ್ನನ್ನು ಸಂತಯಿಸಿ ಸತ್ಕರಿಸಿ ಕಳುಹಿಸಿದರು.

ಅಂದಿನಿಂದ ನಾನು ಇದ್ದುದರಲ್ಲಿಯೇ ಉಂಡು ತಿಂದು ತೃಪ್ತಿಪಡಬೇಕೆಂದು ನಿಶ್ಚಯಿಸಿ, ಮುಂದೆ ಪ್ರಯಾಣಮಾಡುವ ಗೊಡವೆಯನ್ನೇ ಬಿಟ್ಟುಬಿಟ್ಟಿದ್ದೇನೆ. ನನ್ನ ಹಣವು ನನ್ನ ದುಡಿತನದ ಫಲವು. "ಕಷ್ಟವಿಲ್ಲದೆ ಇಷ್ಟವಿಲ್ಲ."

ಈ ಪ್ರಕಾರ ಸಿಂದಬಾದನು ತನ್ನ ಏಳು ಪ್ರಯಾಣಗಳ ಕಥೆಯನ್ನು ಆ ಬಡ ಕೂಲಿಯವನಿಗೂ ತನ್ನ ಇತರ ಗೆಳೆಯರಿಗೂ ಸವಿಸ್ತಾರವಾಗಿ ಹೇಳಿದನು. ಅವರೆಲ್ಲರೂ ಚಕಿತರಾಗಿ ಆತನನ್ನು ಸಕಲ ಸಂಕಷ್ಟಗಳಲ್ಲಿಯೂ ಪಾರುಮಾಡಿದ ದೇವರನ್ನು ಕೊಂಡಾಡಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಸಿಂದಬಾದನು ಆ ಬಡಕೂಲಿಯವನಿಗೆ ತಕ್ಕಷ್ಟು ಹಣವನ್ನು ಕೊಟ್ಟು ಸತ್ಕರಿಸಿ ಆತನನ್ನು ಮನೆಗೆ ಕಳುಹಿಸಿದನು.

ಮಕ್ಕಳ ಕಥೆಗಳು

ಆರು ಪೈ

ಅರ್ಗಣಿ [illegible]ುದ್ದೆ

ಒಂಭತ್ತು ಪೈ

ಗಾ[illegible]ು ಕೋಳಿ, ಪುಕ್ಕದ ಕಪ್ಪು
*ಚಿಟ್ಟೇ ಬಸವ[illegible]ಳಿ
*ಅಂಗಳದುಗ್ಗ[illegible]
ಜೋಡು ನಕ್ಷತ್ರ
ಕೊ[illegible]ಕ್ಕೊ ಕ್ಕೊಕ್ಕೋ ಕೋಳಿ

ಒಂದು ಆಣೆ

*ಮೆಣಸಿನ ಕಾಳಪ್ಪ
ಮೂರು ಕರಡಿಗಳು
*ಸಿಗಡಿ ಯಾಕೆ ಒಣಗಲಿಲ್ಲ?
*ಗುಡುಗುಡು ಗುಮ್ಮಟಿ ದೇವರು
ಒಡ್ಡನ ಓಟ
ಗೋವಿಂದಾ! ಗೋವಿಂದಾ!
ಬೆಕ್ಕಿನ ಬಿಡಾರ ಬೇರೆ
*ಇಲಿಗಳ ಥಕ್ಕಥೈ

*ಹೇನು ಸತ್ತು ಕಾಗೆ ಬಡವಾಯಿತು
ಮಾತಾಡೋ ರಾಮಪ್ಪ
ಗೋಣಿತಟ್ಟಿನ ಪಟ್ಟೆಹುಲಿ

ಒಂದು ಆಣೆ ಆರು ಪೈ

ಏಕ್‌ರೋಜ್‌ಕಾ ಖಲೀಫ್
ಬೊಕ್ಕೆ ಬಾಯಿ ಕೊಕ್ಕ ರಾಜ
*ಚಟಪಟ ಹನಿಯಪ್ಪ

ಎರಡು ಆಣೆ

ಸಿಂದಬಾದ ನಾವಿಕ
ಅಲ್ಲಾವುದ್ದೀನನ ವಿಚಿತ್ರ ದೀಪ

ಎರಡು ಆಣೆ ಆರು ಪೈ

*ಅಜ್ಜಿ ಸಾಕಿದ ಮಗು
*ಅಗೊಳಿ ಮಂಜಣ

ಇತರ ಪುಸ್ತಕಗಳು

ಒಂದು ಆಣೆ

ಮಗ್ಗಿ ಪುಸ್ತಕ

ಎರಡು ಆಣೆ

°ಹೊಸ ಕನ್ನಡ ಪುಸ್ತಕ ೧ನೇ ಭಾಗ
,, ೨ನೇ ಭಾಗ
*ಅರಬಸ್ಥಾನ
*ಚೀನ

ಮೂರು ಆಣೆ

ಶಶಿಕಾಂತನ ವಿಲು
ಕಾಣಿಕೆ

ನಾಲ್ಕು ಆಣೆ

ಚಂಡಕೌಶಿಕ
ಸಮಾಜದ್ರೋಹಿ
ಬಾರಕೂರಿನ ಗತವೈಭವ
ಕೃಷ್ಣ ಸಂಧಾನ
ಒಂದನೆ ಎರಡನೆ ದರ್ಜೆಯ ಕಥೆಗಳು (೧)

ಐದು ಆಣೆ

ಒಂದನೆ ಎರಡನೆ ದರ್ಜೆಯ ಕಥೆಗಳು (೨)
ಐದನೆ ದರ್ಜೆಯ ಚರಿತ್ರೆ ಮತ್ತು ಕಥೆಗಳು
ಅಜಿತ ಕುಮಾರ
ಲಘುವಿಜ್ಞಾನ ಪಾಠಮಾಲಿಕೆ ಭಾಗ ೩ 1—0—0
ಚಾಣಕ್ಯತಂತ್ರ ಭಾಗ ೧

ಆರು ಆಣೆ

ಕೋಟಿಚೆನ್ನಯ
ರಮಾ ಮಾಧವ
ಸೀತಾರಾಮ
ಯಾದವ ಕೃಷ್ಣ
ಭೀಷ್ಮನ ಕಥೆ
ಕಾವ್ಯರತ್ನಾಕರ

ಎಂಟು ಆಣೆ

ಹಸಿವು
ಕಲಿಯುಗದ ಭೀಷ್ಮ
ಹಿಡಿಂಬೆ
ಚಾಣಕ್ಯತಂತ್ರ ಭಾಗ ೨
ಪದ್ಯಸಂಗ್ರಹ

ಹತ್ತು ಆಣೆ

ಸ್ವಾಮಿನಿಷ್ಠೆ
ಭ್ರಾತೃಪ್ರೇಮ
ನಾಟಕ ಕಲೆ

ಹನ್ನೆರಡು ಆಣೆ

*ಲಘುವಿಜ್ಞಾನ ಪಾಠಮಾಲಿಕೆ, ಪ್ರಥಮ ಪುಸ್ತಕ (೧)
ರಾಮಾಶ್ವಮೇಧ
*ಲಘುವಿಜ್ಞಾನ ಪಾಠಮಾಲಿಕೆ, ಪ್ರಥಮ ಪುಸ್ತಕ (೨)
ಸುಭದ್ರಾವಿಜಯ ನಾಟಕಂ 1—0—0
ಕೃಷ್ಣಾಕುಮಾರಿ 1—4—0
ಶೂದ್ರಕ—ಅಜ್ಜಿನಲ್ಲಿದೆ

---

* ಇವು ಸಚಿತ್ರ ಪುಸ್ತಕಗಳು.

ಪರಾಮರ್ಶೆಗಾಗಿ